"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

(158ನೇ ಅಧಿವೇಶನ)

ಬುಧವಾರ, 29ನೇ ಜನವರಿ 2026

## ವಿಷಯಾನುಕ್ರಮಣಿಕೆ (INDEX)

01. ಘನತೆವೆತ್ತ ರಾಜ್ಯಪಾಲರು ಜಂಟಿ ಅಧಿವೇಶನನ್ನುದ್ದೇಶಿಸಿ ಭಾಷಣ ಮಾಡಿದ ಸಂದರ್ಭದಲ್ಲಿನ ಘಟನಾವಳಿಗಳ ಕುರಿತು ಮುಂದುವರೆದ ಚರ್ಚೆ.

- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)
- ಶ್ರೀ ಸಿ.ಟಿ.ರವಿ
- ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು)
- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಡಿ.ಎಸ್.ಅರುಣ್
- ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಎಂ.ನಾಗರಾಜು
- ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು)

~~ ~~ ~~

(64) 29/01/2026 11:10 ಎಸ್‌ಪಿಆರ್/ಕೆಎಸ್(ಎಂಡಿ)

# ಕರ್ನಾಟಕ ವಿಧಾನ ಪರಿಷತ್ತು

ಗುರುವಾರ, 29ನೇ ಜನವರಿ 2026

ಸದನವು ಬೆಂಗಳೂರಿನ ವಿಧಾನಸೌಧದಲ್ಲಿರುವ
ವಿಧಾನ ಪರಿಷತ್ತಿನ ಸಭಾಂಗಣದಲ್ಲಿ
ಪೂರ್ವಾಹ್ನ 11 ಗಂಟೆ 17 ನಿಮಿಷಕ್ಕೆ ಸಮಾವೇಶಗೊಂಡಿತು.

ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಅವರು
ಪೀಠದಲ್ಲಿ ಉಪಸ್ಥಿತರಿದ್ದರು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಸದನ ಪ್ರಾರಂಭವಾಗುತ್ತಿದ್ದಂತೆ, ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿಯವರು ಮತ್ತು ಶ್ರೀ ಎಸ್.ಎಲ್.ಭೋಜೇಗೌಡರು ಮತ್ತು ಶ್ರೀ ಸಿ.ಟಿ.ರವಿ ಇವರುಗಳನ್ನು ಹೊರತುಪಡಿಸಿ, ಬಿ.ಜೆ.ಪಿ. ಮತ್ತು ಜೆ.ಡಿ.(ಎಸ್) ಪಕ್ಷದ ಇನ್ನಿತರೆ ಮಾನ್ಯ ಸದಸ್ಯರುಗಳು ಸದನದ ಬಾವಿಗೆ ಬಂದು ಧರಣಿ ನಿರತರಾದರು)**

**01. ಘನತೆವೆತ್ತ ರಾಜ್ಯಪಾಲರು ಜಂಟಿ ಅಧಿವೇಶನನ್ನುದ್ದೇಶಿಸಿ ಭಾಷಣ ಮಾಡಿದ ಸಂದರ್ಭದಲ್ಲಿನ ಘಟನಾವಳಿಗಳ ಕುರಿತು ಮುಂದುವರೆದ ಚರ್ಚೆ.**

- - - - -

**ಸಭಾಪತಿಯವರು:-** ಈಗ ಏನು ವಿರೋಧ ಪಕ್ಷದ ಸದಸ್ಯರುಗಳು ಬಾವಿಯಲ್ಲಿ ಇದ್ದಾರಲ್ಲ; ದಯಮಾಡಿ ಅವರುಗಳು ತಮ್ಮ ಸ್ಥಳಕ್ಕೆ ಹೋಗಿ ಕುಳತುಕೊಳ್ಳುವಂತೆ ಹೇಳುತ್ತೇನೆ. ವಿರೋಧ ಪಕ್ಷ ನಾಯಕರೇ, ಅವರುಗಳು ಬಾವಿಯಲ್ಲಿ ಏಕೆ ನಿಂತಿದ್ದಾರೆ ಎಂದು ಹೇಳಿದರೆ, ನಾನು ಅದಕ್ಕೆ ಉತ್ತರ ಹೇಳುತ್ತೇನೆ. ಅವರುಗಳು ಬಾವಿಯಲ್ಲಿ ಏಕೆ ನಿಂತಿದ್ದಾರೆ ಎಂದು ತಿಳಿಸಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಇದು ಎರಡು ದಿವಸದಿಂದ ನಡೆದಿರುವುದು.

**ಸಭಾಪತಿಯವರು:-** ಅದು ಏಕೆ ಎಂದು ಹೇಳಿಬಿಡಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಇದು ಸಣ್ಣ ವಿಷಯ. ವಿಷಾದ ವ್ಯಕ್ತಪಡಿಸುತ್ತೇನೆ ಎಂದು ಸರ್ಕಾರವು ಹೇಳಿದರೆ ಮುಗಿದು ಹೋಯಿತು. ಸಭಾನಾಯಕರನ್ನು ನಾವು ಪ್ರಶ್ನೆ ಮಾಡುತ್ತಾ ಇರತಕ್ಕಂತಹ ....

**ಸಭಾಪತಿಯವರು:-** ನೀವು divert ಮಾಡಬೇಡಿ. ಅವರುಗಳು ಬಾವಿಯಲ್ಲಿ ಏಕೆ ಬಂದು ನಿಂತಿದ್ದಾರೆ ಅಷ್ಟನ್ನು ಮೊದಲು ನನಗೆ ಹೇಳಿ. ಅವರುಗಳು ನಿಂತಿರುವುದಕ್ಕೆ ಬೇರೆ ಕಾರಣವಿದೆ. ಅದನ್ನು ಹೇಳಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ನಾವು ಕೇಳಿರುವುದು very simple ಇದೆ. ಸಭಾನಾಯಕರು ಅವರ ಹೇಳಿಕೆಗೆ ವಿಷಾದ ವ್ಯಕ್ತಪಡಿಸುತ್ತೇವೆಂದು ಹೇಳಿದರೆ, ನಮ್ಮದು ಅಭ್ಯಂತರವೇ ಇಲ್ಲ. ಅದನ್ನು ಮಾಡಿ ಎಂದು ನಾವು ಹೇಳಿದ್ದೇವೆ.

**ಸಭಾಪತಿಯವರು:-** ಇದರ ಸಲುವಾಗಿಯೇ ಅವರು ಬಾವಿಯಲ್ಲಿ ಬಂದು ನಿಂತಿದ್ದಾರೆಯೇ? **ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಹೌದು, ಹೌದು.

**ಸಭಾಪತಿಯವರು:-** ಮತ್ತೆ ಸಚಿವ ಆರ್.ಬಿ.ತಿಮ್ಮಾಪೂರ ರವರ ಸಲುವಾಗಿ ಬಂದಿಲ್ಲವೇ?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಅಲ್ಲ; ಅಲ್ಲ. ಅದರದ್ದು ನೀವು ರೂಲಿಂಗ್ ಅನ್ನು ಕೊಟ್ಟು ಆಗಿದೆ. ಎಲ್ಲರಿಗೂ ಮಾತನಾಡಲು ಅವಕಾಶವನ್ನು ಕೊಡುತ್ತೇವೆ ಎಂದು ಹೇಳಿದ್ದಕ್ಕೆ ನಾವು ಒಪ್ಪಿದ್ದೇವೆ.

**ಸಭಾಪತಿಯವರು:–** ಈಗ ನೀವು ಸಭಾನಾಯಕರ ಸಲುವಾಗಿ ಬಾವಿಗೆ ಬಂದಿದ್ದೀರಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಅಷ್ಟೇನೆ; ಬೇರೆ ಏನೂ ಅಲ್ಲ.

**ಸಭಾಪತಿಯವರು:–** ಸಭಾನಾಯಕರೇ, ಇದಕ್ಕೆ ಏನು ಹೇಳುತ್ತಿರೋ ಹೇಳಿ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಈ ವಿಷಯದ ಬಗ್ಗೆ ಮೊನ್ನೆ ಮತ್ತು ನಿನ್ನೆಯ ದಿನ ಪ್ರಸ್ತಾವನೆ ಬಂದಾಗ, ನಿನ್ನೆಯ ದಿನ ಬೆಳಗ್ಗೆ ಶ್ರೀಮಾನ್ ಎಸ್.ಎಲ್.ಭೋಜೇಗೌಡರು, ವಿರೋಧ ಪಕ್ಷದ ನಾಯಕರು ಮತ್ತು ಬೇರೆ ಸದಸ್ಯರು ತಮ್ಮ ಸಮ್ಮುಖದಲ್ಲಿ ಸೇರಿದೆವು. ಆಗ ಉಪ ಸಭಾಪತಿಗಳೂ ಸಹಿತ ತಮ್ಮ ಸಮ್ಮುಖದಲ್ಲಿದ್ದರು. ಅಲ್ಲಿ ಏನು ಹೇಳಿದರೆಂದರೆ, ನೀವು ವಂದನಾ ನಿರ್ಣಯಕ್ಕೆ ಅನುಮೋದನೆ ಇದೆಯೇ ಅಥವಾ ಇಲ್ಲ ಎಂಬ ಮಾತನ್ನು ಇವತ್ತಿನ ದಿವಸ ವಿರೋಧ ಪಕ್ಷದ ನಾಯಕರು repeatedly ಎರಡು ದಿವಸಗಳಿಂದ ಹೇಳುತ್ತಿದ್ದಾರೆ. ಸರ್ಕಾರವು ಅದರ ಪರವಾಗಿದೆ ಎಂದು ಹೇಳಿ ನಾನು ಹೇಳುತ್ತಿದ್ದೇನೆ ಎಂಬ ಮಾತನ್ನು ಅಲ್ಲಿ ಹೇಳಿದ್ದೇನೆ. ಅದೇ ಮಾತನ್ನು ಇಲ್ಲಿ ಬಂದು ಹೇಳುವಂತೆ ನನಗೆ ಹೇಳಿದರು. ತಮ್ಮ ಮತ್ತು ಉಪಸಭಾಪತಿಗಳ ಸಮ್ಮುಖದಲ್ಲಿ ಶ್ರೀ ಎಸ್.ಎಲ್.ಭೋಜೇಗೌಡರು ಆ ಮಾತನ್ನು ಹೇಳಿದರು. ಆ ವಿಷಯದ ಬಗ್ಗೆ ನಾನು ಇಲ್ಲಿಗೆ ಬಂದು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ವಂದನಾ ನಿರ್ಣಯದ ಬಗ್ಗೆ ಸರ್ಕಾರದ ಅನುಮೋದನೆ ಇದೆ ಹಾಗೂ ಅದರ ಪರವಾಗಿ ಇದೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಇದಾದ ನಂತರ ಶ್ರೀ ಎನ್.ರವಿಕುಮಾರ್ ರವರು ಎದ್ದು ಕೇವಲ ಹೇಳಿದರೆ ಆಗುವುದಿಲ್ಲ; ಇತಿಹಾಸದಲ್ಲಿ ಇದು ಮುಂದುವರೆಯುತ್ತದೆ, ಅದನ್ನು ಖಂಡಿಸಿದ್ದಾರೆ ಎಂದು ಅವರು ಹೇಳಿದರು. ಅದಕ್ಕೆ ನಾವು ಏನೂ ಹೇಳಿಲ್ಲ. ಅದಕ್ಕೆ ತಾವೇ ನಿರ್ಧಾರವನ್ನು ತೆಗೆದುಕೊಂಡು, **[XXX]** ಎಂಬ ಶಬ್ದವನ್ನು ತೆಗೆದು ಹಾಕುತ್ತೇನೆ ಎಂಬುದಾಗಿ ತಾವು ಹೇಳಿಬಿಟ್ಟಿರಿ. ತಾವು ಹೇಳಿದ್ದನ್ನು ನಾವು ಒಪ್ಪಿಕೊಂಡಿದ್ದೇವೆ. ಇದಾದ ಮೇಲೆ ಮತ್ತೇಕೆ ಅವರು ಬಾವಿಗೆ ಬಂದರು? ಇದಾದ ನಂತರ ಮಧ್ಯಾಹ್ನ ಪ್ರಶ್ನೋತ್ತರ ಅವಧಿ ಎಂದು ತಾವು ಹೇಳಿದಿರಿ. ನಾಲ್ಕು ನಾಲ್ಕು ಪ್ರಶ್ನೆಗಳು ನಡೆಯುತ್ತಿವೆ;

(ಮುಂದು)

(65)29-01-2026/11-20/bkp-rn (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎನ್.ಎಸ್.ಬೋಸರಾಜು(ಮುಂದು)**

ಆ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರು ಎದ್ದು ನಿಂತು ಮರು ಪರಿಶೀಲನೆ ಮಾಡಿದ್ದಾರೆನ್ನುವ ಮಾತನ್ನು ಹೇಳಿದರು. ಅದು ಏನಾಯಿತು, ಇದು ಏನಾಯಿತು ಎಂದು ಕೇಳಿದಾಗ ತಾವು ಹೇಳಿದ್ದು ಏನೆಂದರೆ, ನೀವುಗಳು ಇಬ್ಬರು ಪತ್ರವನ್ನು ಕೊಟ್ಟಿದ್ದೀರಿ, ಆ ಎರಡು ಪತ್ರಗಳ ಆಧಾರದ ಮೇಲೆ ಅಡ್ವೋಕೇಟ್ ಜನರಲ್‌ರವರ ಮತ್ತು ಇನ್ನು ಕೆಲವರ ಜೊತೆಯಲ್ಲಿ ನಾನು ಮಾತನಾಡಿ ಈ ರೀತಿಯ ನಿರ್ಧಾರ ತೆಗೆದುಕೊಂಡಿದ್ದೇನೆ

ಎಂದು ಹೇಳಿದ ಮೇಲೆ ಅದನ್ನು ಪರಿಗಣಿಸದೇ ಅವರು ತೀಕ್ಷಣವಾಗಿ ಅವರು ನಿಯಮಾವಳಿಗಳ ಪುಸ್ತಕವನ್ನು ಹರಿದು ಹಾಕಿರುವುದಾಗಿದೆ. ಈ ವಿಷಯಕ್ಕೂ ಆ ವಿಷಯಕ್ಕೂ ಸಂಬಂಧವಿಲ್ಲ. ಆ ವಿಷಯ ಮುಗಿದು ಹೋಗಿದೆ. ಯಾವಾಗ ನೀವು ಆ ಒಂದು ಶಬ್ದವನ್ನು ರೆಕಾರ್ಡ್‌ನಿಂದ ತೆಗೆದ ಮೇಲೆ ಅ ವಿಷಯ ಅಲ್ಲಿಗೆ ಮುಗಿದು ಹೋಯಿತು. ಅವರು ಎರಡು ದಿನಗಳಿಂದ ಇದೇ ವಿಚಾರದ ಬಗ್ಗೆ ಹತ್ತಾರು ಬಾರಿ ಪ್ರಸ್ತಾಪಿದ್ದಾರೆ. ಮಂತ್ರಿಗಳು ಇಲ್ಲಿ ಇದ್ದಂತಹ ಸಂದರ್ಭದಲ್ಲಿ ಹೇಳಿದರು. ಅಲ್ಲಿಯೂ ಹೇಳಿದ್ದಾರೆ, ಇಲ್ಲಿಯೂ ಹೇಳಿದ್ದಾರೆ, ನೀವು ಇದರ ಪರವಾಗಿದ್ದೀರೋ, ವಿರೋಧವಾಗಿದ್ದೀರೋ ಅದು ಸ್ಪಷ್ಟವಾಗಬೇಕು. ಎರಡು ಕೂಡಿ ಹೋಗಲಿಕ್ಕೆ ಸಾಧ್ಯವಿಲ್ಲ. ಸರ್ಕಾರ ಇದರ ಪರವಾಗಿ ಇದ್ದೇವೆಂದು ಸ್ಪಷ್ಟವಾಗಿ ಹೇಳಿದೆ. ಇದರ ಬಗ್ಗೆ ನಾವು ಸ್ಪಷ್ಟನೆ ಕೊಟ್ಟಿದ್ದೇವೆ. ಆ ಒಂದು ಶಬ್ದ ಸರಿಯಿಲ್ಲವೆಂದು ಅವರುಗಳು ರೈಸ್ ಮಾಡಿದರು. ಅದರ ಬಗ್ಗೆ ತಾವು ತೀರ್ಮಾನ ತೆಗೆದುಕೊಂಡಿದ್ದೀರಿ. ಅ ಶಬ್ದವನ್ನು ತಾವು ಕಡತದಿಂದ ಹಾಕಿದ್ದೀರಿ. ಅ ವಿಷಯ ಮುಗಿದು ಹೋಗಿದೆ. ಭೋಜನ ವಿರಾಮದ ನಂತರ ಸದನ ಪ್ರಾರಂಭವಾಗಿದೆ. ಪ್ರಶ್ನೋತ್ತರದ ಬಗ್ಗೆ ತಾವು ಹೇಳಿದಿರಿ. 4-4 ಪ್ರಶ್ನೆಗಳು ನಡೆಯುತ್ತಿವೆ. ನಡೆಯುವಂತಹ ಸಂದರ್ಭದಲ್ಲಿ ಬಂದು ಆವೇಶದಲ್ಲಿ ಮಾಡಿರುವಂತಹ ವಿಷಯವಾಗಿದೆ. ಈಗ ಅವರು ಈ ಬಗ್ಗೆ ಸ್ಪಷ್ಟನೆ ಕೊಡಬೇಕು.

**ಸಭಾಪತಿಯವರು:-** ಸಭಾನಾಯಕರೆ, ನಾನು ಈಗ ನಿಮಗೆ ಒಂದು ಮಾತನ್ನು ಹೇಳುತ್ತೇನೆ. ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯಕ್ಕೆ ತಮ್ಮ ಸಂಪೂರ್ಣ ಸ್ವಾಗತ ಇದೆಯೇ ಎಂದು ಕೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೆ, ಈಗಾಗಲೇ ಈ ವಿಚಾರವಾಗಿ ಪ್ರಸ್ತಾವನೆ ಮಾಡಲಿಕ್ಕೆ ಹೇಳಿದ್ದು, ಅದನ್ನು ನಮ್ಮ ಸದಸ್ಯರು ಪ್ರಸ್ತಾವನೆ ಮಾಡಿದ್ದಾರೆ. ಅದಕ್ಕೆ ಅನುಮೋದನೆಯಾಗಿದೆ, ಅದರ ಮೇಲೆ ಚರ್ಚೆ ನಡೆಯುತ್ತಿದೆ.

**ಶ್ರೀ ಸಿ.ಟಿ.ರವಿ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ...

**ಸಭಾಪತಿಯವರು:-** ಈ ವಿಷಯವಾಗಿ ಯಾರಿಗೂ ಮಾತನಾಡಲಿಕ್ಕೆ ಅವಕಾಶವಿರುವುದಿಲ್ಲ. ಶ್ರೀಯುತ ರವಿಯವರೆ, ತಾವು ಸೇರಿದಂತೆ ಎಲ್ಲರೂ ನಾನು ಹೇಳುವುದನ್ನು ಕೇಳಿ. ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಚರ್ಚೆ ಈಗ ಪ್ರಾರಂಭವಾಗಿದೆ. ಇದರ ಬಗ್ಗೆ ಈಗಾಗಲೇ ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾರವರು ಸ್ವಲ್ಪ ಮಾತನಾಡಿದ್ದಾರೆ. ಮತ್ತೆ, ಮಾನ್ಯ ಮುಖ್ಯಮಂತ್ರಿಗಳು ಮಧ್ಯಾಹ್ನ ಬಂದು ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ. ಅವರು ಉತ್ತರ ಕೊಡುವ ಸಮಯದಲ್ಲಿ ನೀವು ಮಾತನಾಡಲಿಲ್ಲವೆಂದರೆ, ಸದನದಲ್ಲಿ ಏನು ನಡೆಯಬೇಕೆಂದು ಹೇಳಿ. ನೀವು Point of order ಎತ್ತಿ ಕೇಳುತ್ತೀರಿ. ನಿಮಗೆ ಎಷ್ಟು ಹೇಳಬೇಕೆಂದು ಹೇಳಿ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ,

**ಸಭಾಪತಿಯವರು:-** ನೀವು ಮಾತನಾಡುವಂತಹ ಚಟವನ್ನು ಕಡಿಮೆ ಮಾಡಿ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾನಾಯಕರು, 22ನೇ ತಾರೀಖು....

**ಸಭಾಪತಿಯವರು:-** ಈಗ ನಾನು ಅದೇ ವಿಚಾರವಾಗಿ ಹೇಳಿದ್ದೇನೆ. ನಾನು ರಾಜ್ಯಪಾಲರ ಭಾಷಣವನ್ನು ಸ್ವಾಗತ ಮಾಡುತ್ತೇನೆಂದರೆ ನಿಮಗೆ ಅರ್ಥವಾಗುತ್ತದೆ ಎಂದು ತಿಳಿದುಕೊಂಡಿದ್ದೇನೆ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, ಅವರು ಆ ರೀತಿಯಲ್ಲಿ ಹೇಳಿರುವುದಿಲ್ಲ. ಅವರು ಹೇಳಿರುವುದು ಏನೆಂದರೆ.

**ಸಭಾಪತಿಯವರು:-** ಈಗ ಅವರು ಹೇಳಿದ್ದಾರೆ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, ರಾಜ್ಯಪಾಲರು ವಿಧಾನಮಂಡಲದಲ್ಲಿ ನಡೆದುಕೊಂಡ ರೀತಿಯನ್ನು ನಾವು **[XXX]** ಎಂದು ಅ ವರು ಹೇಳಿದ್ದರು.

**ಸಭಾಪತಿಯವರು:-** ಈಗ ಸ್ವಾಗತ ಮಾಡುತ್ತೇವೆಂದು ಹೇಳಿದ್ದಾರೆ.

**ಶ್ರೀ ಸಿ.ಟಿ.ರವಿ:-** ಅವರು ಸಂವಿಧಾನದ ಅನುಚೇಧ 163 ಮತ್ತು 173 ಕ್ಕೆ ವಿರುದ್ಧವಾಗಿ ನಡೆದುಕೊಂಡಿದ್ದಾರೆ. ಇಡೀ ಕರ್ನಾಟಕ ಜನತೆಗೆ ಮತ್ತು ವಿಧಾನ ಮಂಡಲಕ್ಕೆ ಅಗೌರವವನ್ನು ತೋರಿಸಿದ್ದಾರೆ. ಹಾಗಾಗಿ, ನಾವು ಅದನ್ನು ಪ್ರತಿಭಟಿಸುತ್ತಿದ್ದೇವೆ ಹಾಗೂ ಇವರು ಕೇಂದ್ರ ಸರ್ಕಾರದ ಕೈಗೊಂಬೆಯಂತೆ ನಡೆದುಕೊಳ್ಳುತ್ತಿದ್ದಾರೆಂದು ಸಭಾನಾಯಕರು ಹೇಳಿದ್ದಾರೆ.

**ಸಭಾಪತಿಯವರು:-** ನಿಮಗೆ ಎಷ್ಟು ಬಾರಿ ಹೇಳಬೇಕು? ಇದನ್ನು ಮುಗಿಸಬೇಕು, ಸಣ್ಣ-ಪುಟ್ಟ ವಿಚಾರಗಳಿಗೆ ಪ್ರತಿಯೊಂದಕ್ಕೂ ಗೆರೆ ಕೊರೆದ ಹಾಗೆ ಮಾಡಿದರೆ ಹೇಗೆ? ಆಯಿತು, ಸ್ವಲ್ಪಮಟ್ಟಿಗೆ ಹೊಂದಾಣಿಕೆ ಮಾಡಿಕೊಂಡು ಹೋಗೋಣ. ಕೆಲವು ವಿಷಯಗಳು ಮುಖ್ಯವಾಗಿವೆ. ಸದನ ನಡೆಯಬೇಕಾಗಿದೆ.

**ಶ್ರೀ ಸಿ.ಟಿ.ರವಿ:-** ಅವರು ತಮ್ಮ ಮಾತುಗಳನ್ನು ಇದನ್ನು ವಾಪಸ್ಸು ಪಡೆದಿದ್ದಾರೆಯೇ, ವಾಪಸ್ಸು ಪಡೆದು ವಿಷಾದವನ್ನು ವ್ಯಕ್ತಪಡಿಸಿದ್ದಾರೆಯೇ? ಇಲ್ಲ, ವ್ಯಕ್ತಪಡಿಸಿರುವುದಿಲ್ಲ, ವಿಷಾದವನ್ನು ವ್ಯಕ್ತಪಡಿಸಿರುವುದಿಲ್ಲ. ವಾಪಸ್ಸು ಸಹಿತ ಪಡೆದಿಲ್ಲ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಕ್ಷಮೆ ಕೋರಬೇಕೆಂದು ನಾವು ಕೇಳಿದ್ದು, ನಾವು ಅದರ ಬಗ್ಗೆ ಪಟ್ಟು ಹಿಡಿಯಲಿಲ್ಲ. ಸದನ ನಡೆಯಬೇಕಾದರೆ ಈ ರೀತಿಯಲ್ಲಿ ಹೋಗುವುದು ಬೇಡವೆಂದು ಹೇಳಿ ನಾವುಗಳು ಬಾವಿಗೆ ಬಂದು ಕೇಳಿಕೊಂಡಿದ್ದೇವೆ. ಆದರೆ, ಅವರು ಹಠವನ್ನು ಹಿಡಿದು ಅವರದನ್ನೇ ಸಾಧಿಸಿಕೊಂಡು ಬರುತ್ತಿದ್ದಾರೆ. ನೀವು ಅ ಶಬ್ದವನ್ನು ಕಡತದಿಂದ ತೆಗೆದಿದ್ದೀರಿ.

**ಶ್ರೀ ಸಲೀಂ ಅಹ್ಮದ್(ಸರ್ಕಾರಿ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ,

**ಸಭಾಪತಿಯವರು:-** ಅ ಶಬ್ದವನ್ನು ಕಡತದಿಂದ ತೆಗೆದಿದ್ದೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಆಯಿತು, ನಾವು ಅದನ್ನು ಸ್ವಾಗತಿಸುತ್ತೇವೆ. ನನ್ನ ಪದಗಳನ್ನು ನಾನು ವಾಪಸ್ಸು ಪಡೆದಿದ್ದೇನೆ. ಇದು ಆಗಬಾರದಿತ್ತು, ನಾನು ವಿಷಾಧ ವ್ಯಕ್ತಪಡಿಸಿದ್ದೇನೆಂದರೆ ಅಲ್ಲಿಗೆ ಮುಗಿದು ಹೋಗುತ್ತದೆ. ಆ ಮೇಲೆ ಕೇಂದ್ರ ಸರ್ಕಾರದ ಕೈಗೊಂಬೆ.... ಇದೆಲ್ಲಾ ಬೇಕಿರಲಿಲ್ಲ.

(ಗೊಂದಲ)

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೆ, ಅವರು ದಿನಕ್ಕೊಂದು ಮಾತನಾಡುತ್ತಿದ್ದಾರೆ, ಗಂಟೆಗೊಮ್ಮೆ ಬದಲಾವಣೆ ಮಾಡುತ್ತಿದ್ದಾರೆ. ಅವರು ಹೇಳಿದ ಹಾಗೆಯೇ ಮಾನ್ಯ ಸಭಾನಾಯಕರು ಈಗಾಗಲೇ ಹೇಳಿದ್ದಾರೆ. ಇದೇ ವಿಚಾರವಾಗಿ ನಿನ್ನೆಯಿಂದ ಸುಮಾರು 5 ಗಂಟೆ ಸದನದ ಸಮಯ ಹಾಳಾಗಿದೆ. ಇದರ ಬಗ್ಗೆ ಚರ್ಚೆ ಮಾಡಿಕೊಂಡು ಅವರು ಹಠ ಹಿಡಿದಿದ್ದಾರೆ. ನಾವು ಹಠ ಹಿಡಿದಿರುವುದಲ್ಲ. ಅವರು ಹೇಳಿದಂತೆಯೇ ನೀವು ಆ ಒಂದು ಶಬ್ದವನ್ನು ಕಡತದಿಂದ ತೆಗೆದಿದ್ದೀರಿ. ಮಾನ್ಯ ಸಭಾನಾಯಕರು ಸ್ವಾಗತ ಮಾಡಿದ್ದೇವೆಂದು ಹೇಳಿದ್ದಾರೆ. ಸ್ವಾಗತ ಮಾಡಿದರೂ ಇವರು ಒಪ್ಪುವುದಿಲ್ಲವೆಂದರೆ ಇವರು ಸದನ ನಡೆಸಲು ತಯಾರಿಲ್ಲ.

(ಗೊಂದಲ)

**ಶ್ರೀ ಸಿ.ಟಿ.ರವಿ:-** ಸಂವಿಧಾನ ಏನು ಹೇಳುತ್ತದೆ?

**ಸಭಾಪತಿಯವರು:-** ಈಗ ನಾನು ಒಂದು ತೀರ್ಮಾನಕ್ಕೆ ಬಂದಿದ್ದೇನೆ. ನಾವು ಸಂಪೂರ್ಣವಾಗಿ ಮಾನ್ಯ ರಾಜ್ಯಪಾಲರ ಭಾಷಣವನ್ನು ಸ್ವಾಗತ ಮಾಡುತ್ತೇವೆಂದು ಅವರು ಹೇಳಿದಂತಹ ಸಂದರ್ಭದಲ್ಲಿ indirectly ಅವರು ಆಡಿದ ಮಾತುಗಳನ್ನು ಹಿಂದೆ ತೆಗೆದುಕೊಂಡಂತೆ ಎಂದು ನಾನು ಭಾವಿಸಿದ್ದೇನೆ. ಸದನ ಸರಿಯಾಗಿ ನಡೆಯಬೇಕೆನ್ನುವ ಭಾವನೆ ಇದೆ. ಮತ್ತೆ, ನೀವು ಅವರನ್ನು ಕೇಳಿದಾಗ ತಾವು ಸ್ವಲ್ಪ reasonable ಆಗಿ ಬಾವಿಯಿಂದ ಹೊರಗಡೆ ಬಂದು ತಮ್ಮ ತಮ್ಮ ಸ್ಥಳಗಳಲ್ಲಿ ಕುಳಿತರೆ, ನಾವು ಸದನವನ್ನು ನಡೆಸಬಹುದಾಗಿದೆ ಮತ್ತು ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಆಗದಿದ್ದರೆ...

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ತಾವೇ ಈ ಬಗ್ಗೆ ಹೇಳಿ, ಇದನ್ನು ತೆಗೆದು ಹಾಕಿದರೆ ಅರ್ಥ ಈ ರೀತಿಯಲ್ಲಿ ಬರುತ್ತದೆ ಎಂದೇನು ಇದೆಯೇ? ಇದರ ಬಗ್ಗೆ ನೀವೇ ಹೇಳಿ.

**ಸಭಾಪತಿಯವರು:-** ಹಾಗಾದರೆ, ನಾವು ಏನು ಮಾಡಬೇಕೆಂದು ಹೇಳಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ನಾವು ಒಂದು ವಿಷಯವನ್ನು ಕೇಳಿದ್ದೇವೆ. ಕ್ಷಮಾಪಣೆ ಬೇಡ, "ವಿಷಾದ ವ್ಯಕ್ತಪಡಿಸುತ್ತೇನೆ," ನಾನು ಈ ರೀತಿಯಲ್ಲಿ ಹೇಳಬಾರದಿತ್ತು" ಎಂದು ಇಷ್ಟು ಹೇಳಿದರೆ ಸಾಕು. ಅಲ್ಲಿಗೆ ವಿಷಯ ಮುಗಿದು ಹೋಗುತ್ತದೆ. ಅದನ್ನು ತೆಗೆದಿದ್ದರಿಂದ ಹೀಗೆ ಅರ್ಥ ಬರುತ್ತದೆ, ಅದು ಯಾವ ಶಬ್ಧಕೋಶದಲ್ಲಿದೆ? ಹೋಗಲಿ, ಆ ಒಂದು ಶಬ್ದಕೋಶದ ಹೆಸರನ್ನಾದರೂ ಹೇಳಿ. ನೋಡಿ, ಅದನ್ನು ಅರ್ಥ ಮಾಡಿಕೊಂಡು ಬಿಟ್ಟುಬಿಡುತ್ತೇವೆ.

**ಸಭಾಪತಿಯವರು:-** ಹಾಗಾದರೆ ಸದನವನ್ನು ನಡೆಸುವಂತಹ ಅವಶ್ಯಕತೆ ಇರುವುದಿಲ್ಲ. ಈ ರೀತಿಯಲ್ಲಿಯಾದರೆ ...

**ಶ್ರೀ ಸಿ.ಟಿ.ರವಿ:-** ಸಂವಿಧಾನದ ಅನುಚ್ಛೇದ 163 ಮತ್ತು 173ಕ್ಕೆ ಪೂರಕವಾಗಿ...

**ಸಭಾಪತಿಯವರು:-** ಶ್ರೀಯುತ ಸಿ.ಟಿ.ರವಿಯವರೆ, ಸಾಕು ನಿಲ್ಲಿಸಿ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, ಈಗ ಸಂವಿಧಾನದ ಆಧಾರದ ಮೇಲೆಯೇ ನಮ್ಮ ನೀತಿ ನಿಯಮಗಳನ್ನು ರೂಪಿಸಿರುವುದಾಗಿದೆ. ಸಂವಿಧಾನದ ಆಧಾರದ ಮೇಲೆ. ನಮ್ಮ ಈ ಸದನಕ್ಕೆ ಸ್ವಾತಂತ್ರ್ಯ ಮತ್ತು ಮಿತಿ ಇರುವುದಾಗಿದೆ.

(ಗೊಂದಲ)

**ಸಭಾಪತಿಯವರು:-** ಶ್ರೀಯುತ ಸಿ.ಟಿ.ರವಿಯವರೆ, ಸಾಕು ಕುಳಿತುಕೊಳ್ಳಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಅವರು ಹೇಳಿರುವುದಕ್ಕೆ ಇದಕ್ಕೆ "ವಿಷಾಧಿಸುತ್ತೇನೆಂದು" ಹೇಳಿದರೆ ಅಲ್ಲಿಗೆ ಮುಗಿದು ಹೋಯಿತು.

**ಶ್ರೀ ಬಿ.ಕೆ. ಹರಿಪ್ರಸಾದ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಮಗೂ ಸಹ ಮಾತನಾಡಲಿಕ್ಕೆ ಅವಕಾಶವನ್ನು ಕೊಡುತ್ತೀರಾ?

**ಸಭಾಪತಿಯವರು:-** ಕುಳಿತುಕೊಳ್ಳಿ ಅವಕಾಶವನ್ನು ಕೊಡುತ್ತೇನೆ, ಕುಳಿತುಕೊಳ್ಳಿ, ಹೆಸರಿಸಬೇಡಿ

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, ಅವರು ಹೇಳಿರುವ ಮಾತನ್ನು ನಾನು ಕಳುಹಿಸುತ್ತೇನೆ, ತಾವು ಅದನ್ನು ನೋಡಿ, ಇದು ಸರಿ ಇದೆ ಎಂದು ಹೇಳಿದರೆ ನಾನು ಏನೂ ಮಾತನಾಡುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಸಿ.ಟಿ. ರವಿಯವರು ತಮ್ಮ ಹತ್ತಿರ ಇದ್ದಂತಹ ಮಾಹಿತಿಯನ್ನು ಮಾನ್ಯ ಸಭಾಪತಿಯವರಿಗೆ ಕಳುಹಿಸಿ ಕೊಟ್ಟರು)**

**ಸಭಾಪತಿಯವರು:-** ಈಗ ನನಗೆ ಸದನವನ್ನು ನಡೆಸಬೇಕೆಂದು ಇದೆ. ನಾನು ಹೇಳಿದ್ದೇನೆ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೆ, ಇದಕ್ಕಿಂತ ಮುಂಚೆ ನಿನ್ನೆ ಏನು ನಮ್ಮ ಸದನದ ನಿಯಮಾವಳಿಗಳ ಪುಸ್ತಕವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಹರಿದು ಹಾಕಿ, ಅವಮಾನ ಮಾಡಿದಿರಲ್ಲಾ, ಅದರ ಬಗ್ಗೆ ನೀವು ಏನು ತೀರ್ಮಾನ ತೆಗೆದುಕೊಳ್ಳುತ್ತೀರಿ? ನಿನ್ನೆ ನಾನು ಅವರಿಗೆ ಈ ಬಗ್ಗೆ ಹೇಳಿದ್ದೆ.

**ಶ್ರೀ ಡಿ.ಎಸ್. ಅರುಣ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಅದರ ಮುಂಚಿನ ಪ್ರಕರಣಗಳು ಸಹ ಹಾಗೆಯೇ ಇವೆ. ನಾವು ಮುಂದುವರಿಸಲಿಕ್ಕೆ ಸಿದ್ಧರಿದ್ದೇವೆ.

**ಸಭಾಪತಿಯವರು:-** ನನ್ನ ಅನುಮತಿ ಇಲ್ಲದೇ ಮಾತನಾಡಿದವರ ಚರ್ಚೆ ಯಾವುದೂ ಸಹ ಕಡತಕ್ಕೆ ಹೋಗಬಾರದು.

**ಶ್ರೀ ಎನ್.ರವಿಕುಮಾರ್ :-** ಮಾನ್ಯ ಸಭಾಪತಿಯವರೆ, ನಮಗೆ ಸದನ ನಡೆಯಬೇಕು. ವಿಷಯಕ್ಕೆ ಬರುತ್ತೇನೆ.

**ಸಭಾಪತಿಯವರು:-** ನೀವುಗಳು ಹಾಗೆಯೂ ಹೇಳುತ್ತೀರಿ, ಈ ರೀತಿಯಲ್ಲೂ ಹೇಳುತ್ತೀರಿ, ಸದನ ನಡೆಯಬೇಕೆಂದು ಹೇಳುತ್ತೀರಿ, ನಡೆಯಬಾರದು ಎಂದು ಹೇಳುತ್ತೀರಿ. ನಾನು ಸಾಕಷ್ಟು ನೋಡಿದ್ದೇನೆ. ಆದರೆ, ಇಂತಹವರನ್ನು ನಾನು ನೋಡಿರುವುದಿಲ್ಲ.

**ಶ್ರೀ ಎನ್.ರವಿಕುಮಾರ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ತಮ್ಮ ಮುಂದೆ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದೇನೆಂದರೆ, ಪೀಠಕ್ಕಿಂತ ದೊಡ್ಡವರು ಯಾರು ಇಲ್ಲ, ಸದನಕ್ಕಿಂತ ದೊಡ್ಡವರು ಯಾರು ಇಲ್ಲ.

**ಶ್ರೀ ಸಲೀಂ ಅಹಮದ್:-** ಅವರು ಕರ್ನಾಟಕ ವಿದಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಾವಳಿಗಳ ಪುಸ್ತಕವನ್ನು ಹರಿದು ಹಾಕಿ ಅವಮಾನ ಮಾಡಿದ್ದಾರೆ.

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೆ,

**ಶ್ರೀ ಎನ್.ರವಿಕುಮಾರ್:-** ಸ್ವಲ್ಪ ಸಮಾಧಾನ. ರಾಜ್ಯಪಾಲರಿಗೆ ಯಾರು ಅಪಮಾನ ಮಾಡಿದ್ದಾರೆಂದು ಎಲ್ಲರಿಗೂ ಗೊತ್ತಿದೆ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೆ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಾವಳಿಗಳ ಪುಸ್ತಕವನ್ನು ಹರಿದು ಹಾಕಿದವರು ಯಾರು?

**ಶ್ರೀ ಎನ್.ರವಿಕುಮಾರ್:-** ಪೀಠದ ಮೇಲೆ ಕುಳಿತಂತಹ ಉಪ ಸಭಾಪತಿಯವರನ್ನು ಎಳೆದು ಹಾಕಿದ್ದು ಯಾರು ಎಂದು ಚೆನ್ನಾಗಿ ಗೊತ್ತಿದೆ. ನಮಗೆ ಪಾಠ ಮಾಡುವ ಅವಶ್ಯಕತೆ ಇಲ್ಲ.

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):-** ಇವರು ಯಾರಿಗೂ ಕಾಣದ ಸತ್ಯ ಹರಿಶ್ಚಂದ್ರರು. ಇವರು ಮಾತನಾಡಬಾರದು. ಇವರು ರಾಷ್ಟ್ರಗೀತೆಗೆ ಅವಮಾನ ಮಾಡಿದರು.

**ಶ್ರೀ ಸಲೀಂ ಅಹಮದ್:-** ಅದನ್ನು ನೀವು ಮಾಡಿರುವುದು ಸರಿ ಇದೆಯೇ? ನಿಯಮಾವಳಿಗಳ ಪುಸ್ತಕವನ್ನು ಹರಿದು ಹಾಕಿರುವುದು ಸರಿ ಇದೆಯೇ?

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ನಮ್ಮ ವಿನಂತಿ ಏನೆಂದರೆ, ಸದನ ನಡೆಯಬೇಕು ಎನ್ನುವ ಕಾರಣಕ್ಕೋಸ್ಕರ ನಿನ್ನೆ ನಮ್ಮ ಪ್ರತಿ ಪಕ್ಷದ ನಾಯಕರು ಹೌದು, ನಮ್ಮ ಕಡೆಯಿಂದ ಈ ನಿಯಮಾವಳಿಗಳ ಪುಸ್ತಕವನ್ನು ಹರಿದಿರುವುದಕ್ಕೆ ತಮ್ಮ ವಿಷಾದವನ್ನು ವ್ಯಕ್ತ ಮಾಡಿದರು. ಮಾನ್ಯ ಸಭಾಪತಿಯವರು ಕೊಟ್ಟಿರತಕ್ಕಂತಹ ರೂಲಿಂಗ್‌ಗೆ ಅನುಸಾರವಾಗಿ ಆಯಿತು ಎಂದು ಹೇಳಿ, ಸದನ ನಡೆಯಬೇಕೆಂದು ನಮ್ಮ ಕಡೆಯಿಂದ ವಿಷಾದ ವ್ಯಕ್ತಪಡಿಸಿರುತ್ತೇವೆ.

**ಸಭಾಪತಿಯವರು:–** ಈ ವಿಚಾರವನ್ನು ನಾನೇ ಹೇಳಿದ್ದೇನೆ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೆ, ಆಯಿತು. ನೀವು ಪೀಠಕ್ಕೆ ಅವಮಾನ ಮಾಡಿಲ್ಲ, ನೀವು ವಿಷಾದ ವ್ಯಕ್ತಪಡಿಸಿ ಎಂದು ಹೇಳಿದಿರಿ.

**ಸಭಾಪತಿಯವರು:–** ಈ ವಿಚಾರವನ್ನು ನಾನೇ ಹೇಳಿದ್ದೇನೆ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೆ, ತಾವು ಹೇಳಿದ್ದೀರಿ. ಈಗ ಬಂದಿರುವಂತಹ ಪ್ರಶ್ನೆ ಏನು ಎಂದರೆ, ಹೌದು. ನಾವು ಖಂಡನೆ ಮಾಡಿರುವುದು ತಪ್ಪು, ರೆಕಾರ್ಡ್‌ನಲ್ಲಿ ಹೋಗಿರುವುದನ್ನು ತೆಗೆದುಹಾಕಬೇಕೆಂದು ಹೇಳಿದಾಗ ತಾವು ತೆಗಿಸಿ ಹಾಕಿದ್ದೀರಿ. ಹೇಗೆ ಮಾನ್ಯ ವಿರೋಧ ಪಕ್ಷದ ನಾಯಕರು ವಿಷಾದವನ್ನು ವ್ಯಕ್ತಪಡಿಸಿದರು, ಅದೇ ದಾರಿಯಲ್ಲಿ ಇವರು ಏತಕ್ಕೆ ವಿಷಾದವನ್ನು ವ್ಯಕ್ತಪಡಿಸಲಿಲ್ಲ? ಸಭಾನಾಯಕರು ಸದನಕ್ಕಿಂತ ದೊಡ್ಡವರೆ?

**ಶ್ರೀ ಎನ್.ಎಸ್.ಬೋಸರಾಜು:–** ಮಾನ್ಯ ಸಭಾಪತಿಯವರೆ, ಅವರು ಮತ್ತೆ ರೆಕಾರ್ಡ್‌ಗೆ ತೆಗೆದುಕೊಂಡು ಹೋಗುತ್ತಾರೆ. ಅವರು ವಿಷಾದವನ್ನು ವ್ಯಕ್ತಪಡಿಸಿರುವುದಿಲ್ಲ. ಅದು ಹಾಗೆಯೇ ಇದೆ. ಪುಸ್ತಕ ಹರಿದು ಹಾಕಿದ್ದಕ್ಕೆ ಅವರನ್ನು ಹೊರಗಡೆ ಹಾಕಬೇಕೆಂದು ನಾವು ಕೇಳುತ್ತಿದ್ದೆವು. ಅದರ ಬಗ್ಗೆಯೂ ತೀರ್ಮಾನ ಅಗಬೇಕು. ಆ ವಿಷಯ ಇನ್ನೂ ಮುಗಿದಿಲ್ಲ, ಮುಗಿದಿದೆ ಎಂದು ಅವರು ತಿಳಿದುಕೊಂಡಿದ್ದಾರೆ. ವಿರೋಧ ಪಕ್ಷದ ನಾಯಕರು ಮಾಡಿರತಕ್ಕಂಥಾದ್ದು ಖಂಡನೀಯ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೆ, ನಮ್ಮ ಪ್ರತಿಪಕ್ಷದ ನಾಯಕರು ವಿಷಾದ ವ್ಯಕ್ತಪಡಿಸಬಹುದು, ಇವರು ವಿಷಾದ ವ್ಯಕ್ತಪಡಿಸುವಂತಿಲ್ಲ. ಇವರು ಸದನಕ್ಕಿಂತ ದೊಡ್ಡವರೇ? ಅವರು ವಿಷಾದವನ್ನು ವ್ಯಕ್ತಪಡಿಸಲಿ. ಆದ್ದರಿಂದ ಸಭಾನಾಯಕರು ವಿಷಾದವನ್ನು ವ್ಯಕ್ತಪಡಿಸಬೇಕು. ಮತ್ತೆ ನೀವು ರಾಜ್ಯಪಾಲರಿಗೆ ಏಜೆಂಟಾ ಎಂದು ಕೇಳುತ್ತಾರೆ. Yes, ನಾನು ಸಂವಿಧಾನದ ಏಜೆಂಟ್.

**(ಗೊಂದಲ)**

**ಸಭಾಪತಿಯವರು:–** ಆಯಿತು ಕುಳಿತುಕೊಳ್ಳಿ. ನಾನು ಹೇಳಿದ್ದನ್ನು ಎಲ್ಲರೂ ತಿಳಿದುಕೊಳ್ಳಿ. ನಾನು clear cut ಆಗಿ ಹೇಳಿದ್ದೇನೆ. ಶ್ರೀಯುತ ನಾಗರಾಜು ರವರೆ ಮಾತನಾಡಿ.

**ಶ್ರೀ ಎಂ. ನಾಗರಾಜು(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಅವಕಾಶ ಕೊಟ್ಟ ತಮಗೆ ಧನ್ಯವಾದಗಳು. ನಾವೆಲ್ಲರೂ ಕೂಡ ಸಂವಿಧಾನ ಶ್ರೇಷ್ಠ ಎಂದು ಹೇಳುತ್ತೇವೆ. ಪೀಠ ಮತ್ತು ರಾಜ್ಯಪಾಲರಿಗಿಂತ ದೊಡ್ಡದು ಇರತಕ್ಕಂತಹದ್ದು ದೇಶದಲ್ಲಿ ಯಾವುದಾದರೂ ಇದ್ದರೆ ಅದು ಸಂವಿಧಾನ ಎಂದು ಹೇಳಿ ನಾವೆಲ್ಲರೂ ನಂಬಿಕೆಯನ್ನು ಇಟ್ಟುಕೊಂಡಿರುತ್ತೇವೆ. ನಾವು ಅಂದು raise ಮಾಡಿರತಕ್ಕಂತಹದ್ದು, Article 176 of the Constitution violate ಆಗಿದೆ ಎಂದು ಹೇಳಿ ನಾವು ಹಕ್ಕನ್ನು ಪ್ರತಿಪಾದನೆ ಮಾಡಿದ್ದೇವೆ. With due respect to the Governor of Karnataka ಎನ್ನುವ ಮಾತನ್ನು ಹೇಳುತ್ತಿದ್ದೇವೆ. ನಿನ್ನೆ ನಡೆದಂತಹ

ವಿಚಾರಗಳನ್ನು ನೋಡಿದಾಗ ಈ ಒಂದು ಪುಸ್ತಕವನ್ನು ಕೈಯಲ್ಲಿ ಇಟ್ಟುಕೊಂಡು ಹೇಳುತ್ತಿದ್ದೇನೆ, ಇದನ್ನು ಪಾಲನೆ ಮಾಡಬೇಕು, ಓದಿಕೊಂಡು ಬರಬೇಕು, ಇದನ್ನು ಗೌರವಿಸಬೇಕು, ಇದರ ಪ್ರಕಾರ ನಡೆದುಕೊಳ್ಳಬೇಕೆಂದು ಪೀಠ ಆದೇಶ ಮಾಡಿದಾಗ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳು ಭಾರತ ಸಂವಿಧಾನದ 208(1) ರ ಅನುಚ್ಛೇಧದ ಮೇರೆಗೆ ರಚನೆಯಾಗಿರುತ್ತದೆ ಎಂದು ಹೇಳತಕ್ಕಂತಹದ್ದನ್ನು ನಾವು ಪಾಲನೆ ಮಾಡಬೇಕೋ ಬೇಡವೋ ಹೇಳಿ. ಪಾಲನೆ ಮಾಡದಿದ್ದರೆ, ಇದಕ್ಕೆ ಅವಮಾನ ಮಾಡಿದಿರಿ. ಇದನ್ನು ಹರಿದು ಬಿಸಾಕಿದರೆ ಪೀಠ ಏನು ಕ್ರಮ ತೆಗೆದುಕೊಳ್ಳುತ್ತದೆ ಎನ್ನುವುದನ್ನು ನಾನು ಕೇಳುತ್ತಿದ್ದೇನೆ.

**ಸಭಾಪತಿಯವರು:-** ಆಯಿತು, ಇದರ ಬಗ್ಗೆ ಹೇಳುತ್ತೇನೆ. ಶ್ರೀಯುತ ಹರಿಪ್ರಸಾದ್‌ರವರು ಮಾತನಾಡಬೇಕು.

**ಶ್ರೀ ಬಿ.ಕೆ. ಹರಿಪ್ರಸಾದ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಸನ್ಮಾನ್ಯ ಸದಸ್ಯರು ಹೇಳಿರುವ ವಿಚಾರದ ಬಗ್ಗೆ ನಾನು ಸಹ ಹೇಳುತ್ತಿದ್ದೇನೆ. ನಮ್ಮ ನಿಯಮಾವಳಿಗಳ ಪುಸ್ತಕ ಹರಿದಿರುವುದಕ್ಕೆ ವಿಷಾದ ವ್ಯಕ್ತಪಡಿಸಿದ್ದೇವೆಂದು ಹೇಳುತ್ತಾರೆ. ಇದು ಪುಸ್ತಕ ಅಲ್ಲ. ಇದು ಸಂವಿಧಾನ. ಅನುಚ್ಛೇದ 208(1) ರಲ್ಲಿ ಇದನ್ನು ಮಾಡಿರುವುದಾಗಿದೆ. ಇದಕ್ಕೆ ನೀವು ಅವಮಾನ ಮಾಡಿದರೆ ವಿಷಾದ ಅಲ್ಲ, ಸದನದಿಂದ ಹೊರಗಡೆ ಹಾಕಬೇಕಾಗುತ್ತದೆ. ಅವರನ್ನು suspend ಮಾಡಿ.

**(ಗೊಂದಲ)**

**(ಮುಂದು)**

**(066) 29.01.2026 11.30 ಎಸ್‌ವಿ-ಎಂಡಿ** **(ಸಭಾಪತಿಯವರ ಉಪಸ್ಥಿತಿ)**

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ತಮ್ಮ ಸ್ಥಾನಕ್ಕೆ ಅಗೌರವವನ್ನು ತೋರಿಸಿದ್ದಾರೆ. ಸಂವಿಧಾನಕ್ಕೆ ಅವಮಾನ ಮಾಡಿದ್ದಾರೆ. ಅವರಿಗೆ ಯಾವತ್ತೂ ಸಹ ರೋಗ.. ಸಂವಿಧಾನವನ್ನೇ ಬದಲಾವಣೆ ಮಾಡುತ್ತೇವೆಂದು ಹೇಳಿದ್ದಕ್ಕೆ ಮನೆಗೆ ಕಳುಹಿಸಿದ್ದಾರೆ. ಸಂವಿಧಾನಕ್ಕೆ ಅವಮಾನ ಮಾಡುವುದು, ಬದಲಾವಣೆ ಮಾಡುವುದು ಇವರಿಗೆ ಅಂಟು ರೋಗ. ಆದ್ದರಿಂದ ತಮಗೆ ಅಪಮಾನ ಮಾಡಿದವರನ್ನು ಸದನದಿಂದ ಹೊರಗೆ ಹಾಕಿ ಎಂದು ಕೇಳಿದ್ದೇವೆ.

**ಶ್ರೀ ಎನ್. ರವಿಕುಮಾರ್:-** ಇವತ್ತು ಸದನ ನಡೆಯದೆ ಇರುವುದಕ್ಕೆ ಕಾರಣ ಮಾನ್ಯ ಬಿ.ಕೆ.ಹರಿಪ್ರಸಾದ್.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಅವರಿಂದಲೇ ಇಷ್ಟೆಲ್ಲಾ ಅವಾಂತರಕ್ಕೆ ಕಾರಣವಾಗಿರುವುದು. ಮಾನ್ಯ ಬಿ.ಕೆ.ಹರಿಪ್ರಸಾದ್ ಕಾರಣದಿಂದ ಈ ಸದನ ನಡೆಯುತ್ತಿಲ್ಲ.

**ಶ್ರೀ ಡಿ.ಎಸ್. ಅರುಣ್:-** ಮಾನ್ಯ ಸಭಾಪತಿಯವರೆ, ಅವರು ಇದುವರೆವಿಗೂ ಕ್ಷಮೆ ಕೇಳಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೆ, ರಾಷ್ಟ್ರಗೀತೆ, ತ್ರಿವರ್ಣಧ್ವಜ, ಸಂವಿಧಾನಕ್ಕೆ ಅಪಮಾನ ಮಾಡಿದರೆ ನಮ್ಮ ಪ್ರತಿಭಟನೆ ಇದ್ದೇ ಇರುತ್ತದೆ. ಯಾರು ತ್ರಿವರ್ಣ ಧ್ವಜಕ್ಕೆ, ಯಾರು ಸಂವಿಧಾನಕ್ಕೆ ಗೌರವ

ತೋರಿಸುವುದಿಲ್ಲವೋ ಅವರ ವಿರುದ್ಧ ನಮ್ಮ ಪ್ರತಿಭಟನೆ ಇದ್ದೇ ಇರುತ್ತದೆ. ರಾಷ್ಟ್ರಗೀತೆಗೆ ಗೌರವ ಕೊಡಲಿಲ್ಲ ಎಂದರೆ ಪ್ರತಿಭಟನೆ ಇದ್ದೇ ಇರುತ್ತದೆ. ಸದನವನ್ನು ನಡೆಸುವುದು ಮುಖ್ಯವಲ್ಲ, ಸಂವಿಧಾನ ಮುಖ್ಯ. ರಾಷ್ಟಗೀತೆ ಮುಖ್ಯ, ತ್ರಿವರ್ಣಧ್ವಜ ಮುಖ್ಯ. ಅದಕ್ಕೆ ಅಗೌರವವಾದರೆ ನಮ್ಮ ಪ್ರತಿಭಟನೆ ಇದ್ದೇ ಇರುತ್ತದೆ.

**(ಗೊಂದಲ)**

**ಶ್ರೀ ಎನ್. ರವಿಕುಮಾರ್:-** ಮೊದಲು ಬಿ.ಕೆ.ಹರಿಪ್ರಸಾದ್ ಅವರನ್ನು ಹೊರ ಹಾಕಿದರೆ ಸದನ ನಡೆಯುತ್ತದೆ.

**(ಗೊಂದಲ)**

**ಶ್ರೀ ಡಿ.ಎಸ್. ಅರುಣ್:-** ಮಾನ್ಯ ಸಭಾಪತಿಯವರೆ, ನಾನು ಆಗಿನಿಂದಲೂ ಕೇಳುತ್ತಿದ್ದೇನೆ.

**(ಗೊಂದಲ)**

**ಶ್ರೀ ಸಲೀಂ ಅಹಮದ್:-** ಮಾನ್ಯ ಛಲವಾದಿ ನಾರಾಯಣಸ್ವಾಮಿಯವರನ್ನು ಹೊರ ಹಾಕಬೇಕು.

**(ಗೊಂದಲ)**

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೆ, ನಾನು ಆಗಲಿಂದಲೂ ಮಾತನಾಡಲು ಅವಕಾಶ ಕೇಳುತ್ತಿದ್ದೇನೆ. ನನಗೆ ಅವಕಾಶ ಕೊಟ್ಟಿಲ್ಲ.

**ಸಭಾಪತಿಯವರು:-** ನಿಮಗೆ ಕೊಡಬಾರದೆಂದು ಬೇಕೆಂದೇ ಬಿಟ್ಟಿದ್ದೇನೆ.

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೇ, ಮಾತನಾಡಲು ನಮಗೂ ಅವಕಾಶವನ್ನು ಕೊಟ್ಟರೆ, ನಾವು ಸಹ ಮಾತನಾಡುತ್ತೇವೆಂದು ಹೇಳಿದ್ದು.

**ಸಭಾಪತಿಯವರು:-** ಮುಂಜಾನೆಯಿಂದ ಸಂಜೆಯ ತನಕ ಬರೀ ಇದೇ ಆಯಿತು.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ನಾವು ಸದನದ ನಿಯಮಗಳನ್ನು ಆಧರಿಸಿಯೇ ಹೇಳುತ್ತಿದ್ದೇವೆ ಎನ್ನುವುದನ್ನು ಹೇಳಬಯಸುತ್ತೇನೆ.

**ಸಭಾಪತಿಯವರು:-** ನನಗೆ ನಿಯಮಗಳು ಗೊತ್ತಿವೆ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ನಿಯಮ ತಮಗೆ ಗೊತ್ತಿದೆ. ತಾವು ನ್ಯಾಯಪೀಠದಲ್ಲಿದ್ದೀರಿ. ರಾಜ್ಯಪಾಲರಿಗೆ ಅಪಮಾನ ಮಾಡಿದವರ ಮೇಲೆ ನಿಯಮಾನುಸಾರ ಏಕೆ ಕ್ರಮ ಆಗಬಾರದು? ಕ್ರಮ ಆಗಬೇಕೆ ಅಥವಾ ಬೇಡವೇ ಎಂಬುದನ್ನು ಪೀಠ ಹೇಳಬೇಕು. ವಿಳಂಬ ನ್ಯಾಯವು ನ್ಯಾಯ ನಿರಾಕರಣೆಗೆ ಸಮ ಎಂದು ನ್ಯಾಯಾಂಗ ತಜ್ಞರೇ ಹೇಳಿದ್ದಾರೆ.

**ಸಭಾಪತಿಯವರು:-** ನಾನು ಕುಳಿತುಕೊಳ್ಳಿ ಎಂದರೂ ಮಾತನಾಡುತ್ತಿದ್ದೀರಲ್ಲ. ಏನು ಸದನ ನಡೆಸಬೇಕೋ ಬೇಡವೋ? ಎಲ್ಲರಿಗೂ ಅವಕಾಶ ಕೊಡುವುದಕ್ಕಾಗುವುದಿಲ್ಲ.

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೆ, ನೀವು ನೀತಿ ನಿರೂಪಣಾ ಸಮಿತಿಗೆ ಕೊಟ್ಟಿರಿ. ಅದಕ್ಕೆ ತಾವು ಪೀಠದಿಂದ ರೂಲಿಂಗ್ ಕೊಟ್ಟಿರಿ.

**ಸಭಾಪತಿಯವರು:–** ಅದರ ಬಗ್ಗೆ ಮಾತನಾಡಬೇಡಿ. ಮಾನ್ಯ ಪುಟ್ಟಣ್ಣ ಅವರೆ, ನೀವು ಮಾತನಾಡಿ.

**(ಗೊಂದಲ)**

**ಶ್ರೀ ಡಿ.ಎಸ್.ಅರುಣ್:–** ಮಾನ್ಯ ಸಭಾಪತಿಯವರೆ, ಇದು ಸರಿ ಹೋಗುವುದಿಲ್ಲ. ಪುನಃ ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತಿದ್ದೀರಿ. ಇದರ ಸಂಪೂರ್ಣ ಜವಾಬ್ದಾರಿ ಮಾನ್ಯ ಬಿ.ಕೆ.ಹರಿಪ್ರಸಾದ್ ಅವರದ್ದು. ಇವತ್ತು ಸದನ ನಡೆಯುತ್ತಿಲ್ಲ ಎಂದರೆ ಅದಕ್ಕೆ ಮಾನ್ಯ ಬಿ.ಕೆ.ಹರಿಪ್ರಸಾದ್ ಅವರೇ ಕಾರಣರಾಗಿದ್ದಾರೆ. ಅವತ್ತು ಘನತೆವೆತ್ತ ರಾಜ್ಯಪಾಲರ ಮುಂದೆ ಹೋಗಿ ಅವರು ಕೈ ತೋರಿಸಿ ಮಾತನಾಡಿದ್ದು ತಪ್ಪು.

**ಶ್ರೀ ಬಿ.ಕೆ.ಹರಿಪ್ರಸಾದ್:–** **[XXX]**

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ನೋಡಿ, ಮಾನ್ಯ ಬಿ.ಕೆ. ಹರಿಪ್ರಸಾದ್ ಅವರು ಏನು ಹೇಳುತ್ತಿದ್ದಾರೆ? **[XXX]** ಎಂದು ಹೇಳುತ್ತಿದ್ದಾರೆ. ಅಂದರೆ ರಾಜ್ಯಪಾಲರನ್ನೇನು ತಿಳಿದುಕೊಂಡಿದ್ದಾರೆ.

**(ಗೊಂದಲ)**

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಇದು ಉದ್ಧಟತನವಲ್ಲವೇ?

**ಶ್ರೀ ಸಿ.ಟಿ.ರವಿ:–** ಗೌರವಾನ್ವಿತ ರಾಜ್ಯಪಾಲರಿಗೆ ಹಲ್ಲೆ ಮಾಡಲಿಕ್ಕೆ ಹೋಗಿದ್ದಾರೆಯೇ? ಆ ದಿನಗಳು ನಿಮಗೆ ನೆನಪಾಯಿತೇ?

**ಶ್ರೀ ಎನ್. ರವಿಕುಮಾರ್:–** **[XXX]** ಎಂದು ಕೇಳುತ್ತಿದ್ದಾರೆ. ಇದು ಉದ್ಧಟತನವಲ್ಲವೇ? ಇದಕ್ಕೆ ಅವರು ಕ್ಷಮೆ ಕೇಳಬೇಕು.

**(ಮಾನ್ಯ ರವಿಕುಮಾರ್ ಅವರು ಸ್ವಸ್ಥಾನದಿಂದ ಸಭಾಪತಿಯವರ ಪೀಠದ ಮುಂಭಾಗದ ಬಾವಿಗೆ ಆಗಮಿಸಿದರು)**

ಸಭಾಪತಿಯವರು:– ಏನ್ರೀ ನೀವು?

**(ಗೊಂದಲ)**

**ಶ್ರೀ ಸಿ.ಟಿ.ರವಿ:–** ನೀವು **[XXX]** ಇಲ್ಲಿ ತೋರಿಸಬೇಡಿ.

**(ವಿರೋಧ ಪಕ್ಷ ಮತ್ತು ಆಡಳಿತ ಪಕ್ಷದ ಸದಸ್ಯರುಗಳು ಪರಸ್ಪರ ಧಿಕ್ಕಾರ ಕೂಗುತ್ತಿದ್ದರು)**

**ಶ್ರೀ ಸಿ.ಟಿ.ರವಿ:–** ವಜಾ ಮಾಡಿ, ವಜಾ ಮಾಡಿ...

**(ಸದನವನ್ನು ಬೆಳಗ್ಗೆ 11 ಗಂಟೆ 34 ನಿಮಿಷಗಳಿಂದ 10 ನಿಮಿಷಗಳ ಕಾಲ ಮುಂದೂಡಲಾಯಿತು)**

(067) 29.01.2026/2.10/ಎಂವಿ-ವಿಕೆ

**(ಬೆಳಗ್ಗೆ 11 ಗಂಟೆ 34 ನಿಮಿಷಕ್ಕೆ 10 ನಿಮಿಷಗಳ ಕಾಲಾವಧಿಗಾಗಿ ಮುಂದೂಡಲ್ಪಟ್ಟಿದ್ದ ಸದನವು ಪುನಃ ಮಧ್ಯಾಹ್ನ 2 ಗಂಟೆ 12 ನಿಮಿಷಕ್ಕೆ ಪ್ರಾರಂಭವಾಯಿತು)**

**(ಮಾನ್ಯ ಸಭಾಪತಿಯವರು ಪೀಠವನ್ನಲಂಕರಿಸಿದ್ದರು)**

**(ಸದನ ಪ್ರಾರಂಭವಾಗುತ್ತಿದ್ದಂತೆ, ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರು ಮತ್ತು ಶ್ರೀ ಎಸ್.ಎಲ್.ಭೋಜೇಗೌಡರು ಮತ್ತು ಶ್ರೀ ಅಡಗೂರು ಹೆಚ್.ವಿಶ್ವನಾಥ್ ರವರುಗಳನ್ನು ಹೊರತುಪಡಿಸಿ ಬಿ.ಜೆ.ಪಿ. ಮತ್ತು ಜೆ.ಡಿ (ಎಸ್) ಪಕ್ಷದ ಇನ್ನಿತರೆ ಮಾನ್ಯ ಸದಸ್ಯರುಗಳು ಸದನದ ಬಾವಿಗೆ ಬಂದು ಧರಣಿ ನಿರತರಾದರು)**

**ಘನತೆವೆತ್ತ ರಾಜ್ಯಪಾಲರು ಜಂಟಿ ಅಧಿವೇಶನನ್ನುದ್ದೇಶಿಸಿ ಭಾಷಣ ಮಾಡಿದ ಸಂದರ್ಭದಲ್ಲಿನ ಘಟನಾವಳಿಗಳ ಕುರಿತು ಮುಂದುವರೆದ ಚರ್ಚೆ.**

- - - -

**ಸಭಾಪತಿಯವರು:-** ದಯಮಾಡಿ ಸದನದ ಬಾವಿಯಲ್ಲಿ ಇರುವಂತಹವರು ನನ್ನ ಕೊನೆಯ ಮನವಿಗಾದರೂ ಕನಿಷ್ಠ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಿ. ಆಮೇಲೆ ಬರುವಿರಂತೆ. ಈಗ ಸಂಬಂಧವಿಲ್ಲದಿರುವ ವಿಷಯ...

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ತಮ್ಮ ನಿರ್ಧಾರ ಏನು ಎಂಬುದನ್ನು ಕಾಯುತ್ತೇವೆ. ಈಗ ನಮ್ಮ ಪಕ್ಷದ ಸದಸ್ಯರನ್ನು ಬಾವಿಯಿಂದ ಹೊರಗಡೆ ಬರುವುದಕ್ಕೆ ತಿಳಿಸುತ್ತೇನೆ. ದಯಮಾಡಿ ಎಲ್ಲಾ ಮಾನ್ಯ ಸದಸ್ಯರು ಸದನದ ಬಾವಿಯಿಂದ ಹೊರಗಡೆಗೆ ಬನ್ನಿ. ಮಾನ್ಯ ಸಭಾಪತಿಯವರು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುತ್ತಾರೆ. ಅದಾದನಂತರ ನಾವು ಏನು ಮಾಡಬೇಕು ಎನ್ನುವುದನ್ನು ನೋಡೋಣ.

**ಸಭಾಪತಿಯವರು:-** ನಾನು ಒಂದು ವಿಚಾರವನ್ನು ಸದನದ ಮುಂದೆ ಪ್ರಸ್ತಾಪ ಮಾಡುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ಸದಸ್ಯರುಗಳು ಮಾನ್ಯ ಶಾಸಕರಾದ ಶ್ರೀ ಬಿ.ಕೆ.ಹರಿಪ್ರಸಾದ್ ರವರು ಸದನದ ಘನತೆಗೆ ಯೋಗ್ಯವಲ್ಲದ ಪದಗಳನ್ನು ದಿನಾಂಕ 23.01.2026, 28.01.2026 ಮತ್ತು 29.01.2026 ರಂದು ಬಳಸಿರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ, ಮಾನ್ಯ ಬಿ.ಕೆ.ಹರಿಪ್ರಸಾದ್ ರವರ ಮೇಲೆ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ಅನ್ವಯ ಕ್ರಮ ವಹಿಸಬೇಕೆಂದು ವಿನಂತಿಸಿರುತ್ತಾರೆ. ಮಾನ್ಯ ಶಾಸಕರಾದ ಶ್ರೀ ಬಿ.ಕೆ.ಹರಿಪ್ರಸಾದ್‌ರವರು ಬಳಸಿರುವ ಪದಗಳನ್ನು ಸದನದ ನಡವಳಿಕೆಯ ದಾಖಲೆಗಳಲ್ಲಿ

ದಾಖಲಾಗಿರುವುದನ್ನು ನಾನು ಗಮನಿಸಿರುತ್ತೇನೆ. ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೆ, ಈ ರೀತಿ ಅವರು ಒಂದು ದೂರನ್ನು ನೀಡಿದ್ದಾರೆ. ಮತ್ತೆ ನಾನು ಆ ರೆಕಾರ್ಡ್ ಅನ್ನು ಸಹ ನೋಡಿದ್ದೇನೆ. ಅದೆಲ್ಲಾ ರೆಕಾರ್ಡ್‌ನಲ್ಲಿದೆ. ಅದಕ್ಕೆ ತಮ್ಮ ಅನಿಸಿಕೆ ಏನೆಂದು ಹೇಳಬೇಕು.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡುವುದಕ್ಕೆ ಅವಕಾಶ ನೀಡಿರುವುದಕ್ಕೆ ತಮಗೆ ಧನ್ಯವಾದಗಳು. ಅವರು ಯಾವ್ಯಾವ ವಿಚಾರಗಳನ್ನು ಹೇಳಿದ್ದಾರೆ ಎಂದು ಸರಿಯಾಗಿ ಗೊತ್ತಿಲ್ಲ. ಮೊದಲನೆಯದಾಗಿ ಇವತ್ತಿನ ವಿಚಾರ ಬಂದಾಗ, ಮಾನ್ಯ ರಾಜ್ಯಪಾಲರ ವಿಚಾರದಲ್ಲಿ...

**ಸಭಾಪತಿಯವರು:-** ತಾವು ಭಾಷಣ ಮಾಡಬೇಡಿ. ಇದಕ್ಕೆ ನಾನು ಏನು ಹೇಳುತ್ತೇನೆಂದರೆ, ಅವರು ಈ ರೀತಿ ಕೊಟ್ಟಿದ್ದಾರೆ. ಅದಕ್ಕೆ ಅವರಿಗೆ ನಿಮ್ಮ opinion ಅನ್ನು ಹೇಳಿಬಿಡಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು ಅದಕ್ಕೆ ನನ್ನ opinion ಅನ್ನು ಹೇಳುತ್ತಿದ್ದೇನೆ. ಮಾನ್ಯ ಸದಸ್ಯರಾದ ಶ್ರೀ ಡಿ.ಎಸ್.ಅರುಣ್‌ರವರು ನನ್ನ ಹೆಸರನ್ನು ತೆಗೆದುಕೊಂಡು ಹೇಳಿದರು. ನಾನು ಈ ವಿಚಾರವನ್ನು ಹೇಳಿದ್ದು, ಮಾನ್ಯ ಸದಸ್ಯರಾದ ಶ್ರೀ ಡಿ.ಎಸ್.ಅರುಣ್‌ರವರಿಗೆ ವಿನಃ ಮಾನ್ಯ ರಾಜ್ಯಪಾಲರಿಗೆ ಅಲ್ಲ. ಮಾನ್ಯ ರಾಜ್ಯಪಾಲರ ಬಗ್ಗೆ ನಮಗೆ ಅಪಾರವಾದ ಗೌರವವಿದೆ. ನಾವು ಸಂವಿಧಾನಕ್ಕೆ ಕೊಟ್ಟಷ್ಟು ಗೌರವವನ್ನು ಬೇರೆ ಯಾರೂ ಕೊಡುವುದಕ್ಕೆ ಆಗುವುದಿಲ್ಲ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ತಾವು ಓದಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ನಾನು ಹೇಳುವುದು ಮುಗಿದ ಮೇಲೆ ಅವರು ಆಮೇಲೆ ಹೇಳಲಿ. ಮಾನ್ಯ ಸದಸ್ಯರಾದ ಶ್ರೀ ಡಿ.ಎಸ್.ಅರುಣ್‌ರವರು ವೈಯಕ್ತಿಕವಾಗಿ ನನ್ನ ಹೆಸರನ್ನು ಹೇಳಿದ್ದಕ್ಕೋಸ್ಕರ ಉತ್ತರ ಕೊಟ್ಟಿದ್ದೇನೆ. ನಾನು ಮಾನ್ಯ ರಾಜ್ಯಪಾಲರ ಬಗ್ಗೆ ಒಂದು ಕಿಂಚಿತ್ ಹೇಳಿಲ್ಲ. ಅವರು ಹೇಳಿದ್ದಕ್ಕೆ ಅವರಿಗೆ ಸರಿಯಾದ ಉತ್ತರ ಕೊಟ್ಟಿದ್ದೇನೆ ಅಷ್ಟೆ. ಅದರ ಜೊತೆಗೆ ನನಗೆ ಅನಿಸಿದ್ದು ಮತ್ತೊಂದು ವಿಚಾರವೇನೆಂದರೆ, ನಾನು 23ನೇ ತಾರೀಖಿಗೆ ಕೆಲವು ವಿಚಾರಗಳನ್ನು ಮಾತನಾಡಿದ್ದೇನೆಂದು ಮಾನ್ಯ ಕಾನೂನು ಸಚಿವರು ಮತ್ತು ಸಭಾನಾಯಕರು ಹೇಳಿದರು. **[XXX]** ಎನ್ನುವ ವಿಚಾರದಲ್ಲಿ ಯಾರಿಗಾದರೂ ನೋವಾಗಿದ್ದರೆ, ನಾನು ಆ ಪದವನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ. ನನಗೆ ಮಾನ್ಯ ರಾಜ್ಯಪಾಲರು ಮತ್ತು ಸಂವಿಧಾನದ ಬಗ್ಗೆ ಅಪಾರವಾದ ಗೌರವವಿದೆ. ಅವರು ಹೇಳಿದ್ದಕ್ಕೆ ಮಾನ್ಯ ಸದಸ್ಯರಾದ ಶ್ರೀ ಡಿ.ಎಸ್.ಅರುಣ್‌ರವರಿಗೆ ಹೇಳಿದ್ದೇನೆಯೇ ವಿನಃ ಬೇರೆ ಯಾರಿಗೂ ಸಹ ಹೇಳಿಲ್ಲ. ಮತ್ತೊಂದು ವಿಚಾರವನ್ನು ತಾವು ಗಮನವಿಟ್ಟು ಕೇಳಬೇಕಾಗಿದೆ. 23ನೇ ತಾರೀಖಿನಂದು ಮಾತನಾಡುವಾಗಲೂ ಸಹ ಪದೇಪದೇ ವೈಯಕ್ತಿವಾಗಿ ನನ್ನ ಹೆಸರನ್ನು ಇಟ್ಟುಕೊಂಡು ಅವರು ಹೇಳುತ್ತಿದ್ದರು. ನಾನು ಕೆಲವು ಸದಸ್ಯರ ಹೆಸರು ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಅವರು ನನ್ನ ಹೆಸರು ಹೇಳಿಬಿಟ್ಟು ಇಲ್ಲಸಲ್ಲದ ಆರೋಪ ಮಾಡುವಾಗ, ನಾನು ಆ ಸಿಟ್ಟಿನಲ್ಲಿ ಹೇಳಿರತಕ್ಕಂಥದ್ದು ನಿಜ. ಅದರಲ್ಲಿ **[XXX]**ಎನ್ನುವ ವಿಚಾರದಲ್ಲಿ ಯಾರಿಗಾದರೂ ನೋವಾಗಿದ್ದರೆ, ನಾನು ಆ ಪದವನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ.

**ಸಭಾಪತಿಯವರು:–** ಮಾನ್ಯ ಸದಸ್ಯರು ತಾವು ಹೇಳಿದಂತ ಮಾತುಗಳನ್ನು ವಾಪಸ್ಸು ಪಡೆದಿರುವುದರಿಂದ ಆ ಪದಗಳನ್ನು ಕಡತದಿಂದ ತೆಗೆದುಹಾಕಲಾಗಿದೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನನಗೆ ಇದು ಸರಿಯಿದೆ ಎಂದು ಅನಿಸುವುದಿಲ್ಲ. ನಾವು ಕೊಟ್ಟಿರತಕ್ಕಂತಹ ನಮ್ಮ ಮನವಿಯನ್ನು ತಾವು ಸದನಕ್ಕೆ ಓದಿ ಹೇಳಿ. ಆ ಪದಪುಂಜಗಳು ಇಲ್ಲಿ ಬರಬೇಕಾ, ಬರಬಹುದಾ, ಇದು ಸಂವಿಧಾನಿಕವೇ ಎಂದು ಇದನ್ನು ಹೇಳಿ. ಈ ಪದ ವಾಪಸ್ಸು ತೆಗೆದುಕೊಳ್ಳುವುದು ನೀವೆಯೇ ಹೊರತು ನಾವು ಅಲ್ಲ.

**ಸಭಾಪತಿಯವರು:–** ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು; "ಮಾನ್ಯ ಸಭಾಪತಿಯವರೆ, ಕ್ರಿಯಾಲೋಪದ ಬಗ್ಗೆ ಹೇಳುತ್ತೇನೆ ಕೇಳಿ. ಸಂವಿಧಾನಕ್ಕೆ ಅಪಮಾನ ಮಾಡಿದರೆ, ಅದು ಕ್ರಿಯಾಲೋಪವಾಗುತ್ತದೆ. ರಾಷ್ಟ್ರಗೀತೆಗೆ ಅವಮಾನ ಮಾಡಿದ್ದಾರೆ...."

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು):–** ಮಾನ್ಯ ಸಭಾಪತಿಯವರೇ, ಅದು ಆಯಿತು.

**ಸಭಾಪತಿಯವರು:–** ತಾವು ಸರಿಯಾಗಿ ಹೇಳಬೇಕು. ಇಷ್ಟು ಹೊತ್ತಿನವರೆಗೆ ಮಾತನಾಡಿ, ಈಗ ಏನು ಹುಡುಗಾಟಿಕೆಯೇ? ಈಗ ಏನಾದರೂ ಬೇಕಲ್ಲವೇ? ಸದನ ದೊಡ್ಡದೋ ಅಥವಾ ವ್ಯಕ್ತಿ ದೊಡ್ಡವರೋ?

**ಶ್ರೀ ಹೆಚ್.ಕೆ.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ತಮಗೆ ವಿನಂತಿ ಮಾಡುತ್ತೇನೆ.

**ಸಭಾಪತಿಯವರು:–** ತಾವು ಒಂದು ತೀರ್ಮಾನಕ್ಕೆ ಬರಬೇಕಲ್ಲವೇ? ತಾವು ಏನಾದರೂ ಒಂದು ಹೇಳಿ ನೋಡೋಣ. ಈಗ ಸದನದ ಘನತೆ ಗೌರವ ಎತ್ತಿ ಹಿಡಿಯಬೇಕೆಂದು ನಾವೆಲ್ಲರೂ ಹೇಳುತ್ತೇವೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅದು ಸದನಕ್ಕೆ ಗೊತ್ತಾಗಬೇಕು. ತಾವು ಅದನ್ನು ಓದಿ ಹೇಳಿ. ಏಕೆಂದರೆ, ಇದು ನಮಗೆ ಅಪಮಾನ ಮಾಡಿರತಕ್ಕಂಥದ್ದು.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲಿ ಬಿಡಿ. ನಾನು ಉತ್ತರ ಕೊಡುತ್ತೇನೆ. ನನಗೆ ಏನೂ ತೊಂದರೆ ಇಲ್ಲ.

**ಸಭಾಪತಿಯವರು:–** ಒಂದು ನಿಮಿಷ. ನಾನು ಸರ್ಕಾರಕ್ಕೆ ಹೇಳುತ್ತೇನೆ. ತಾವುಗಳು ಅಲ್ಲಿ ಏನು ಮಾತನಾಡಿದ್ದೀರಿ, ಅದರಂತೆ ದಯಮಾಡಿ ಸರ್ಕಾರದವರು ನಡೆಯಬೇಕು.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ತಾವು ಸಿಟ್ಟು ಮಾಡಿಕೊಳ್ಳಬೇಡಿ.

**ಸಭಾಪತಿಯವರು:–** ಅದು ಸಿಟ್ಟು ಅಲ್ಲ. ತಾವು ಸಿಟ್ಟು ಮಾಡಿಕೊಳ್ಳದಂತೆ ತಡೆಯಿರಿ. ತಾವು ವಿಚಾರ ಮಾಡಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ತಡೆಯಿರಿ. ಅವರು ಆ ಪದಗಳನ್ನು ಮಾತನಾಡುವಾಗ ತಾವು ಸುಮ್ಮನೆ ಇದ್ದಿರಿ.

**ಸಭಾಪತಿಯವರು:-** ಏನು ಮಾತನಾಡಿದರು, ನಾನು ಯಾವಾಗ ಸುಮ್ಮನೆ ಇದ್ದೆನು.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವು ಏನು ಪದ ಮಾತನಾಡಿದ್ದೇವೆ ಅದನ್ನು ತೋರಿಸುವುದಕ್ಕೆ ಹೇಳಿ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಾವು ಏನು ಪದಗಳನ್ನು ಬಳಸಿದ್ದೇವೆ?

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅದನ್ನು ಇನ್ನೊಂದು ಬಾರಿ ಏನು ಪದ ಎಂದು ಹೇಳಬೇಕೆ?

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಈ ಸದನಕ್ಕಿಂತ ಯಾರೂ ದೊಡ್ಡವರಲ್ಲ. ಈ ಸದನದ Rules ಬಗ್ಗೆ, ನಿಯಮದ ಬಗ್ಗೆ ಮತ್ತು ಸಂವಿಧಾನದ ಬಗ್ಗೆ ಗೌರವ ಅವರಿಗೆ ಎಷ್ಟಿದೆಯೋ ನಮಗೂ ಕೂಡ ಅಷ್ಟೇ ಇದೆ. **(ಗೊಂದಲ)** ಏನು ಪೀಠವನ್ನು ಹೆದರಿಸುವುದು ಮತ್ತು ಮಾನ್ಯ ಸಭಾಪತಿಯವರನ್ನು ಹೆದರಿಸುವುದೇ?

**ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್ ಒಂದು ನಿಮಿಷ, ತಾವು ದಯವಿಟ್ಟು ಕುಳಿತುಕೊಳ್ಳಿ. ಆ ರೀತಿ ಯಾರು ಮಾತನಾಡಿದರೂ ಕೂಡ ನಾನು ಅದನ್ನು ಕಡತದಿಂದ ತೆಗೆದು ಹಾಕಿದ್ದೇನೆ. ಅವರ ಬಗ್ಗೆ ಮತ್ತು ನಿಮ್ಮ ಬಗ್ಗೆ ಮತ್ತೆ ಇಲ್ಲಿ ಯಾರ ಬಗ್ಗೆಯೂ ಇಲ್ಲ. ಏನು ಸದನದಲ್ಲಿ ನಡೆದಿದೆಯೋ ಅದನ್ನು ನನ್ನ conscious ನಲ್ಲಿ ಇರುತ್ತದೆಯೋ ಅದರ ಪ್ರಕಾರ ನಾನು ಮಾಡಿದ್ದೇನೆ. ಅದಕ್ಕೆ ಈಗ ನಾನು ಏನು ಹೇಳುತ್ತೇನೆಂದರೆ, ಅವರು ಮನವಿಯನ್ನು ಕೊಟ್ಟಿದ್ದಕ್ಕೆ ಕೇಳುತ್ತಿದ್ದೀರಿ. ಅವರು ಮನವಿಯಲ್ಲಿ ಏನೇನು ಬರೆದಿದ್ದಾರೆಂದು ಓದಿ ಹೇಳಬಹುದೇ?

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಆಯಿತು.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ಅದನ್ನು ಓದಬೇಕು. ನೀವು ಆಮೇಲೆ ಕಡತದಿಂದ ತೆಗೆಯಿರಿ ಪರವಾಗಿಲ್ಲ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಾವು ಆ ಪೀಠಕ್ಕೆ ವಿನಂತಿ ಮಾಡುತ್ತಿದ್ದೇವೆ, ನಮ್ಮ ಮನವಿಯನ್ನು ಓದಬೇಕು.

(ಗೊಂದಲ)

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಮಗೆ ಅಪಮಾನವಾಗಿದೆ. ತಾವು ದಯವಿಟ್ಟು ಓದಿ ಹೇಳಬೇಕು.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ತಾವು ಅದನ್ನು ಓದಿ ಹೇಳುವುದಕ್ಕೆ ನನ್ನದು ಏನೂ ಅಭ್ಯಂತರವಿಲ್ಲ. ಆದರೆ, **[XXX]**ಎನ್ನುವ ವಿಚಾರದಲ್ಲಿ ನೋವಾಗಿದ್ದರೆ ನಾನು ಅದಕ್ಕೆ ವಿಷಾದ ವ್ಯಕ್ತಪಡಿಸುತ್ತೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದನ್ನು ತಾವು ಓದಿ ಹೇಳಬೇಕು, ಇಲ್ಲಿ ಒಂದೇ ಇಲ್ಲ; ಹಲವಾರು ಇದೆ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷ ತಾವು ದಯವಿಟ್ಟು ಕುಳಿತುಕೊಳ್ಳಿ. ನಾನು ಅದನ್ನು ಓದುತ್ತೇನೆ. "ಮಾನ್ಯ ಸಭಾಪತಿಯವರೇ, ಕ್ರಿಯಾಲೋಪದ ಬಗ್ಗೆ ಹೇಳುತ್ತೇನೆ ಕೇಳಿ. ಸಂವಿಧಾನಕ್ಕೆ ಅಪಮಾನ ಮಾಡಿದರೆ, ಅದು ಕ್ರಿಯಾಲೋಪವಾಗುತ್ತದೆ. ರಾಷ್ಟ್ರಗೀತೆಗೆ ಅವಮಾನ ಮಾಡಿದ್ದಾರೆ. **[XXX]** ಈ ಎಲ್ಲವನ್ನು ಸಹ ನಾನು ಕಡತದಿಂದ ತೆಗೆದುಹಾಕುತ್ತೇನೆ.

(ಮುಂದು)

(68) 29.01.2026 2.20 LL-BNS (ಸಭಾಪತಿಯವರ ಉಪಸ್ಥಿತಿ)

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಇದು ಚಾರಿತ್ರ್ಯ ವಧೆ ಮಾಡುವಂಥದ್ದು. ಎಲ್ಲಿ ನೋಡಿದ್ದಾರೆ ಇವರು ನಾವು **[XXX]** ಎಲ್ಲಿ ನೋಡಿದ್ದಾರೆ ಇವರು ನಾವು **[XXX]** ಇಷ್ಟೊಂದು ಹಗುರವಾಗಿಯೇ? ಅಸಂವಿಧಾನಿಕ ಪದಗಳನ್ನು ಇಲ್ಲಿ ಬಳಸಿ.., ಏನೆಂದು ತಿಳಿದುಕೊಂಡಿದ್ದಾರೆ ಇವರು?

**ಸಭಾಪತಿಯವರು:–** ಒಂದು ನಿಮಿಷ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದು ಸದನ ನಡೆಯುವ ರೀತಿಯೇ?

**ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಆರ್.ಎಸ್.ಎಸ್. ಬಗ್ಗೆ...

**ಸಭಾಪತಿಯವರು:–** ಅವರು ಮಾತನಾಡುತ್ತಾರೆ, ತಾವು ಕುಳಿತುಕೊಳ್ಳಿ. ಒಂದು ಸಾರಿ ಹೇಳಿದ್ದನ್ನು ತಾವು ಕೇಳಬೇಕು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ತಾವು ಅವರನ್ನು ಸಸ್ಪೆಂಡ್ ಮಾಡಬೇಕು. ಅದನ್ನು ಬಿಟ್ಟು ನಾವು ಬೇರೆ ಯಾವುದನ್ನೂ ಒಪ್ಪುವುದಿಲ್ಲ. ನಾವು ಈ ರೀತಿ ಇದನ್ನು ಅನ್ನಿಸಿಕೊಳ್ಳುವುದಕ್ಕೆ ಇಲ್ಲಿಗೆ ಬರಬೇಕೇ ಸ್ವಾಮಿ?

**ಸಭಾಪತಿಯವರು:-** ಒಂದು ನಿಮಿಷ ಕೇಳಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವು **[XXX]** ಎಂದು ಹೇಳುವುದಕ್ಕೆ ಇವರಲ್ಲಿ ಏನು ಆಧಾರ ಇದೆ? ಇದಕ್ಕೆ ಮುಂದುವರೆದು ನಾನು ಪದಗಳ ಬಳಕೆ ಮಾಡುವುದಿಲ್ಲ. ನಮಗೆ ಅಪಮಾನ ಆಗಿದೆ. ಆಮೇಲೆ ಇದು ಅಸಂವಿಧಾನಿಕವಾಗಿದೆ. ಅಲ್ಲದೇ, ಇದು ಒಂದು ಸಾರಿ ಆದದ್ದಲ್ಲ. ಬಹಳ ಸಾರಿ ನಾವು ಇದನ್ನು ಸಹಿಸಿಕೊಂಡಿದ್ದೇವೆ. ಹಾಗಾಗಿ, ತಾವು ಅವರನ್ನು ಸಸ್ಪೆಂಡ್ ಮಾಡದ ಹೊರತು, ನಾವು ಯಾವುದನ್ನೂ ಒಪ್ಪುವುದಕ್ಕೆ ಸಾಧ್ಯವಿಲ್ಲ.

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ಮೇಜು ತಟ್ಟುವ ಮೂಲಕ ಮಾನ್ಯ ವಿರೋಧ ಪಕ್ಷದ ನಾಯಕರ ಮಾತಿಗೆ ಬೆಂಬಲ ಸೂಚಿಸಿದರು)**

**ಸಭಾಪತಿಯವರು:-** ಒಂದು ನಿಮಿಷ ಕೇಳಿ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಇನ್ನೊಂದು ವಿಷಯ ಇದೆ.

**ಸಭಾಪತಿಯವರು:-** ತಾವೆಲ್ಲರೂ ಏತಕ್ಕೆ ಎದ್ದು ನಿಲ್ಲುತ್ತೀರಿ?

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಾವು ತಮಗೆ ಇನ್ನೊಂದು ಮನವಿಯನ್ನು ಕೊಟ್ಟಿದ್ದೇವೆ. ಅದೇನೆಂದರೆ, ಇವೊತ್ತಿನ ದಿವಸ ಬಳಕೆ ಮಾಡಿರುವಂಥದ್ದು.

**ಸಭಾಪತಿಯವರು:-** ನಾನು ಅದನ್ನೂ ಕೂಡ ಹೇಳಿರುತ್ತೇನೆ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಇಲ್ಲ. ತಾವು ಅದನ್ನು ಹೇಳಿರುವುದಿಲ್ಲ. ಆ ವಿಷಯವೇನೆಂದರೆ, ಮಾನ್ಯ ಸದಸ್ಯರಾದ ಶ್ರೀ ಡಿ.ಎಸ್. ಅರುಣ್‌ರವರು ಮಾತನಾಡುತ್ತಾ, "ನೀವು ಗವರ್ನರ್‌ರವರಿಗೆ ಅಪಮಾನ ಮಾಡಿದ್ದೀರಿ. ಗವರ್ನರ್‌ರವರಿಗೆ ತಾವು ಕೈ ತೋರಿಸಿ ಎಚ್ಚರಿಕೆ ಎಂದು ಹೇಳಿರುತ್ತೀರಿ. ಅದಕ್ಕೆ...

**ಶ್ರೀ ಎ. ವಸಂತ ಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ...,

**ಸಭಾಪತಿಯವರು:-** ತಾವು ಯಾರೂ ಮಾತನಾಡಬೇಡಿ. ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಎ. ವಸಂತ ಕುಮಾರ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ನನ್ನ ಮಾತನ್ನು ಕೇಳಿ. ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರು ಏನು...

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ನಾನು ಮುಗಿಸುತ್ತೇನೆ.

**ಸಭಾಪತಿಯವರು:-** ಒಂದು ನಿಮಿಷ. ಮಾನ್ಯ ವಸಂತ ಕುಮಾರ್‌ರವರೇ, ತಮಗೆ ಮಾತನಾಡಲು ಅವಕಾಶ ನೀಡಿದವರು ಯಾರು? ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಎ. ವಸಂತ ಕುಮಾರ್:-** ಮಾನ್ಯ ಸಭಾಪತಿಯವರೇ, ಅವಕಾಶ ನೀಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇವೆ.

**ಸಭಾಪತಿಯವರು:–** ಒಂದು ನಿಮಿಷ ಕೇಳಿ. ಇದು ಬಹಳ ಗಂಭೀರವಾದ ವಿಷಯವಾಗಿದೆ. ತಾವುಗಳು ಹುಡುಗಾಟಿಕೆ ಮಾಡಬೇಡಿ. ಸದನ ಸ್ವಲ್ಪ ಗಂಭೀರವಾಗಿರಲಿ.

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ನಾನು ಮುಗಿಸುತ್ತೇನೆ.

**ಸಭಾಪತಿಯವರು:–** ಒಂದು ನಿಮಿಷ ನಾನು ಹೇಳುತ್ತೇನೆ. ಈ ದಿನ ಬೆಳಗ್ಗೆ ಮಾನ್ಯ ಸದಸ್ಯರಾದ ಶ್ರೀ ಡಿ.ಎಸ್. ಅರುಣ್‌ರವರು ಮಾತನಾಡುತ್ತಾ, "ಮಾನ್ಯ ಸಭಾಪತಿಯವರೇ, ಇದು ಸರಿಹೋಗುವುದಿಲ್ಲ. ಪುನಃ ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಇದರ ಸಂಪೂರ್ಣ ಜವಾಬ್ದಾರಿ ಶ್ರೀ ಬಿ.ಕೆ. ಹರಿಪ್ರಸಾದ್‌ರವರದ್ದಾಗಿದ್ದು, ಇವೊತ್ತಿನ ದಿವಸ ಸದನ ನಡೆಯುತ್ತಿಲ್ಲವೆಂದರೆ, ಅದಕ್ಕೆ ಮಾನ್ಯ ಬಿ.ಕೆ. ಹರಿಪ್ರಸಾದ್‌ರವರೇ ಕಾರಣರಾಗಿರುತ್ತಾರೆ. ಅವೊತ್ತು ಘನತೆವೆತ್ತ ರಾಜ್ಯಪಾಲರ ಮುಂದೆ ಹೋಗಿ ಕೈ ಎತ್ತಿ ತೋರಿಸಿ ಮಾತನಾಡಿದ್ದು ತಪ್ಪು ಎಂದು ಹೇಳಿರುತ್ತಾರೆ. ಅದಕ್ಕೆ ಶ್ರೀ ಬಿ.ಕೆ. ಹರಿಪ್ರಸಾದ್‌ರವರು, **[XXX]** ಎಂದು ಹೇಳಿರುತ್ತಾರೆ. ಇದನ್ನು ಸಹ ನಾನು ಕಡತದಿಂದ ತೆಗೆದುಹಾಕಿರುತ್ತೇನೆ. ಮಾನ್ಯ ಹರಿಪ್ರಸಾದ್‌ರವರೇ, ದಯಮಾಡಿ ತಮಗೆ ವಿನಂತಿ ಮಾಡುವುದೇನೆಂದರೆ,...

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ತಾವು ಅದನ್ನು ಕಡತದಿಂದ ತೆಗೆಯಿರಿ. ಅದು ಬೇರೆ ವಿಚಾರ. ಕಡತದಿಂದ ತೆಗೆಯುವಂತಹ ವಿಚಾರವನ್ನು ತೆಗೆಯಿರಿ. ಆದರೆ, ನಮಗೆ ಇದಲ್ಲ.

**ಸಭಾಪತಿಯವರು:–** ಅದನ್ನು ನಾನು ಕಡತದಿಂದ ತೆಗೆದಿದ್ದೇನೆ. ಒಂದು ನಿಮಿಷ ಕೇಳಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಆಯಿತು.

**ಸಭಾಪತಿಯವರು:–** ಮಾನ್ಯ ಬಿ.ಕೆ. ಹರಿಪ್ರಸಾದ್‌ರವರೇ, ತಾವು ಬಹಳಷ್ಟು ಅನುಭವಿಗಳು. ಎಷ್ಟೋ ಬಾರಿ ತಮ್ಮ ಮಾರ್ಗದರ್ಶನವನ್ನು ನಾವು ಕೇಳಿದ್ದುಂಟು. ಸದನದಲ್ಲಿ ಇದು ರೆಕಾರ್ಡ್‌ಗೆ ಹೋಗಲಿ ಎಂದು ನಾನು ಈ ಮಾತುಗಳನ್ನು ಹೇಳುತ್ತಿದ್ದೇನೆ. ತಾವು ದೊಡ್ಡ ಮನಸ್ಸು ಮಾಡಿ, ಇದೆಲ್ಲವನ್ನು ಮರೆತು, ಅವರು ಮತ್ತು ನಾವು ಸ್ನೇಹಿತರಾಗಿದ್ದುಕೊಂಡು ಈ ಸದನವನ್ನು ನಡೆಸಬೇಕಾಗಿದೆ. ಹಾಗಾಗಿ, ದಯಮಾಡಿ ತಮ್ಮ ಹೃದಯದಿಂದ ಬರುವಂತಹ ಎರಡು ಮಾತುಗಳನ್ನು ಹೇಳಿದರೆ ನನಗೆ ಖುಷಿ ಎನಿಸುತ್ತದೆ.

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈಗಾಗಲೇ ಆ ವಿಚಾರದಲ್ಲಿ ಹೇಳಿ ಆಗಿದೆ.

**ಸಭಾಪತಿಯವರು:–** ಏನು ಹೇಳಿದ್ದೀರಿ?

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ‘ಆ ವಿಚಾರದಲ್ಲಿ ಯಾರಿಗಾದರೂ ನೋವಾಗಿದ್ದರೆ ವಿಷಾದ ವ್ಯಕ್ತಪಡಿಸಿದ್ದೇನೆ’ ಎಂದು ಹೇಳಿದ್ದೇನೆ.

**ಸಭಾಪತಿಯವರು:–** ‘ಯಾರಿಗಾದರೂ ನೋವಾದರೆ’ ಎಂದು ಬೇಡ. ‘ವಿಷಾದ ವ್ಯಕ್ತಪಡಿಸಿದ್ದೇನೆ’ ಎಂದು ಹೇಳಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅದೇ ಯಾರಿಗಾದರೂ ನೋವಾಗಿದ್ದರೆ. ಇಲ್ಲವಾದರೆ ಅದು ಬೇರೆ ಬೇರೆ ರೀತಿ ಹೋಗುತ್ತದೆ.

**ಸಭಾಪತಿಯವರು:-** ನೋವಾಗದೆಯೇ ಅವರು ಲೆಟರ್ ಕೊಟ್ಟಿದ್ದಾರೆಯೇ?

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಈಗ ನಾನು ಯಾವತ್ತೂ ಮಾತನಾಡುವಂತಹ ಸಂದರ್ಭದಲ್ಲಿ ಎಲ್ಲಿಯೂ ಕೂಡ ಆ ರೀತಿಯ ಪದಗಳನ್ನು ಉಪಯೋಗಿಸುವುದಿಲ್ಲ. Provoke ಮಾಡಿ ನನ್ನ ಬಗ್ಗೆ ಮಾತನಾಡುವಾಗ ನಾನು ಎಷ್ಟು ದಿವಸಗಳು ಸುಮ್ಮನೆ ಕುಳಿತುಕೊಳ್ಳಬೇಕು?

**ಸಭಾಪತಿಯವರು:-** ಅವರು provoke ಮಾಡುತ್ತಾರೆಂದು ತಾವು ಏನು ಬೇಕಾದರೂ ಮಾತನಾಡುವುದಕ್ಕೆ ಆಗುವುದಿಲ್ಲ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ತಾವು ಏನು ಅವರಿಗೆ ನಿರ್ಬಂಧ ಹಾಕಲಿಲ್ಲ. ಜೊತೆಗೆ, ನಾನು ಸಹಜವಾದ ಭಾಷೆಯಲ್ಲಿಯೇ ಮಾತನಾಡಿರುತ್ತೇನೆ. ಪುನಃ ಅದರ ಬಗ್ಗೆ ಚರ್ಚೆ ಬೇಕಾಗಿರುವುದಿಲ್ಲ.

**ಸಭಾಪತಿಯವರು:-** ಬೇಡ, ಚರ್ಚೆ ಬೇಡ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಸಂವಿಧಾನದ ವಿಚಾರ ಬಂದಾಗ **[XXX]** ಎಂದು ಹೇಳುವುದು ಅನ್ನ ತಿನ್ನುವ ಬಾಯಿಯಲ್ಲಿಯೇ ಮಾತನಾಡುವಂತಹ ಮಾತುಗಳೇ?

**ಸಭಾಪತಿಯವರು:-** ಒಂದು ನಿಮಿಷ ಕೇಳಿ ನಾನು ಹೇಳುತ್ತೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಚರ್ಚೆ ಬೇಕಾಗಿರುವುದಿಲ್ಲ. ಇವರು "ಅಯೋಗ್ಯ" ಎಂದು ಹೇಳುತ್ತಾರಲ್ಲವೇ? ಇವರಿಗೆ ಏನು ಯೋಗ್ಯತೆ ಇದೆ?

**ಸಭಾಪತಿಯವರು:-** ಒಂದು ನಿಮಿಷ ಕೇಳಿ. ನಾನು ಚರ್ಚೆಗೆ ಹೋಗಿರುವುದಿಲ್ಲ. ತಾವು ದೊಡ್ಡ ಮನಸ್ಸು ಮಾಡಿ, ಈ ಸದನಕ್ಕೆ ಸ್ವಲ್ಪ ಸಮಾಧಾನ ಮಾಡಿ ಎಂದಷ್ಟೇ ಹೇಳಿರುತ್ತೇನೆ. ಅದರ ಮೇಲೆ ತಮಗೆ ಬಿಟ್ಟದ್ದು. ನಾನು ಬೇರೆ ಏನೂ ಹೇಳಿರುವುದಿಲ್ಲ. ತಾವು ದೊಡ್ಡ ಮನಸ್ಸು ಮಾಡಿ, ವಿಶಾಲ ಹೃದಯದಿಂದ ಹೇಳಿ ಎಂದು ಹೇಳಿರುತ್ತೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಸಮಾಧಾನವಾಗಿದೆ. ಇದು 'ಚಿಂತಕರ ಚಾವಡಿ'. ಹಿರಿಯರ ಸಭೆ. ಎಲ್ಲಿಯೋ ಕುಳಿತುಕೊಂಡು ಮಾತನಾಡಿದ ಹಾಗೆ, ಇಲ್ಲಿ ಮಾತನಾಡಿದರೆ ನಾವು ಎಲ್ಲಿಯೋ ಒಂದು ಕಡೆ... ನಾನು ಕೂಡ ಸುಮಾರು ನಾಲ್ಕು ವರ್ಷಗಳಿಂದ ಸುಮ್ಮನೆ ಕುಳಿತಿದ್ದೇನೆ. ಇವರ ಪಕ್ಷದ ಒಬ್ಬ ಮಂತ್ರಿಯವರೇ...

**ಸಭಾಪತಿಯವರು:-** ಈಗ ಆ ವಿಚಾರ ಬೇಡ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ಇರಿ.

**ಸಭಾಪತಿಯವರು:-** ಮಾನ್ಯ ಎಚ್.ಕೆ. ಪಾಟೀಲರೇ, ನಾವೆಲ್ಲರೂ ನಮ್ಮ ಕಛೇರಿಯಲ್ಲಿ ಏನು ತೀರ್ಮಾನ ಮಾಡಿದ್ದೇವೆ, ಅದನ್ನು ಬಿಟ್ಟು ಈ ರೀತಿ ಮಾತನಾಡಿದರೆ ಹೇಗೆ?

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಈ ಹಿಂದೆ ಇವರ ಪಕ್ಷದವರೇ ಒಬ್ಬರು ಲೋಕೋಪಯೋಗಿ ಸಚಿವರು ಇದ್ದರು. ಅವರು ಇದೇ ಜಾಗದಲ್ಲಿ ನಿಂತುಕೊಂಡು ಏನು ಪದ ಉಪಯೋಗಿಸಿದರೆಂದು ನಾವು ಏನು ಕೇಳಿದ್ದೇವೆಯೇ?

**ಸಭಾಪತಿಯವರು:-** ಅದು ಬೇರೆ ವಿಷಯ. ಈಗ ಬಂದಿರುವ ವಿಚಾರ ಏನೆಂದರೆ, ತಾವು ವಿಷಾದ ವ್ಯಕ್ತಪಡಿಸಿದ್ದೀರಿ. ಮುಂದೆ ಈ ರೀತಿ ಆಗದಂತೆ ನಡೆದುಕೊಳ್ಳಿ ಎಂದು ನಾನು ತಮಗೆಲ್ಲರಿಗೂ ವಿನಂತಿ ಮಾಡುತ್ತೇನೆ. ಈ ಸದನ ಗೌರವಯುತವಾದಂತಹ ಮನೆ. ಯಾರು ಕೂಡ ಈ ರೀತಿ ಮಾತನಾಡುವಂತಹ ಅವಶ್ಯಕತೆ ಇಲ್ಲ. ಯಾರು ಮಾತನಾಡಬೇಡಿ ಎಂದು ಬಹಳ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಈ ಸದನ ಚರಿತ್ರೆಯಲ್ಲಿ ಬಂದಿರುವಂತಹ ಸದನವಾಗಿದೆ. ಇಡೀ ದೇಶದಲ್ಲಿಯೇ ಮಾದರಿಯಾದಂತಹ ಸದನ ಇದು. ಇದನ್ನು ಇದೇ ರೀತಿ ಮುಂದುವರೆಸಿಕೊಂಡು ಹೋಗೋಣ ಎನ್ನುವಂತಹ ಮಾತನ್ನು ಹೇಳಿ ಸದನವನ್ನು ನಾಳೆ ಬೆಳಗ್ಗೆ 11-00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಮಧ್ಯಾಹ್ನ 2 ಗಂಟೆ 25 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ನಾಳೆ ಅಂದರೆ, ದಿನಾಂಕ 30ನೇ ಜನವರಿ ಮಾಹೆ 2026ರಂದು ಬೆಳಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)**

**"[xxx] ಈ ಚಿಹ್ನೆಯು ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆದುಹಾಕಲಾದ ಪದಗಳು ಎಂಬುದನ್ನು ಸೂಚಿಸುತ್ತದೆ."**